ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallmmanudi@gmail.com E-paper: www.mallmmanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy

VOLUME - 13 ಸಂಪುಟ-13 | ISSUE - 30 ಸಂಚಿಕೆ- 30 | PAGE-8 ಪುಟ-8 | ಗುರುವಾರ 06.03.2025 | RS.2/- ಬೆಲೆ 2/-

# ಶೀಘ್ರ ಹಾಲಿನ ದರ ಏರಿಕೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಮಾ.5:ಹಾಲು ಉತ್ಪಾದಕರೈತರಬೇಡಿಕೆಹಾಗೂ ಗ್ರಾಹಕರ ಹಿತ ರಕ್ಷಣೆಯನ್ನು ಗಮನಕ್ಕೆ ತೆಗೆದುಕೊಂಡು ಹಾಲಿನ ದರವನ್ನು ಹೆಚ್ಚಳ ಮಾಡಲಾಗುವುದು ಎಂದು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ವಿಧಾನಪರಿಷತ್ ಗೆ ತಿಳಿಸಿದ್ದಾರೆ.

ರಾಜ್ಯದಲ್ಲಿಸದ್ಯದಲ್ಲಿಯೇಹಾಲಿನ ದರಹೆಚ್ಚಳಮಾಡಲಾಗುವುದು, ಹೆಚ್ಚಳದ ಹಿನ್ನೆಲೆಯಲ್ಲಿ ಹಾಲು ಉತ್ಪಾದಕ ರೈತರ ಬೇಡಿಕೆ ಹಾಗೂ ಗ್ರಾಹಕರ ಹಿತವನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು ಎಂದು ಕಾಂಗ್ರೆಸ್ ನ ಉಮಾಶ್ರೀ ಅವರ ಪ್ರಶ್ನೆಗೆ ಪ್ರಶ್ನೋತ್ತರ ವೇಳೆಯಲ್ಲಿ ಉತ್ತರಿಸಿದರು.

ಹಾಲಿನಖರೀದಿದರಹೆಚ್ಚಿಸುವ ಸಂಬಂಧ ಇರುವ ಸಾಧಕ–ಭಾದಕಗಳ ಎಲ್ಲಾ ಒಕ್ಕೂಟಗಳ ಅಧ್ಯಕ್ಷರುಗಳು, ವ್ಯವಸ್ಥಾಪಕ ನಿರ್ದೇಶಕರುಗಳು,ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂಹಾಲುಮಹಾಮಂಡಳದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಜೊತೆಒಂದುಸುತ್ತಿನ ಸಭೆ ನಡೆಸಿ ಚರ್ಚಿಸಲಾಗಿದೆ ಎಂದು ಹೇಳಿದರು.

ಹಾಲಿನ ದರ, ಹಾಲಿನ ಖರೀದಿದರವನ್ನುಹೆಚ್ಚಿಸುವ ಸಂಬಂಧಮತ್ತೊಂದುಸುತ್ತಿನ ಸಭೆ ನಡೆಸಿ ಅಂತಿಮವಾಗಿ ಮುಖ್ಯಮಂತ್ರಿ ಜೊತೆಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

904547ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಪಾವತಿಸಲು ಬಾಕಿ ಇರುತ್ತದೆ. ಸಾಮಾನ್ಯ ವರ್ಗದ 817074 ಹಾಲು ಉತ್ಪಾದಕರಿಗೆ 5 ತಿಂಗಳು ಪರಿಶಿಷ್ಟ ಜಾತಿಯ 52467 ಹಾಲು ಉತ್ಪಾದಕರಿಗೆ 2 ತಿಂಗಳು ಮತ್ತು ಪರಿಶಿಷ್ಟ ಪಂಗಡದ 35006 ಹಾಲು ಉತ್ಪಾದಕರಿಗೆ4ತಿಂಗಳುಗಳಿಗೆ ಬಾಕಿ ಇರುತ್ತದೆ.

ರಾಜ್ಯದ ರೈತರಿಗೆ ಪ್ರೋತ್ಸಾಹಧನ ಪಾವತಿಸುವಲ್ಲಿ ವಿಳಂಬವಾಗಿರುವುದರಿಂದ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆಬಂದಿದೆ ಎಂದು ಹೇಳಿದರು.

ಪ್ರೋತ್ಸಾಹಧನ ನೀಡಲು ಹೆಚ್ಚುವರಿ ಅನುದಾನ ಅವಶ್ಯವಿದ್ದು ಅನುದಾನ ಬಿಡುಗಡೆಗಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಅನುದಾನ ಬಿಡುಗಡೆಯಾದ ಕೂಡಲೇ ಬಾಕಿ ಬಿಡುಗಡೆ ಮಾಡಲಾಗುವುದು ಎಂದರು.

ಪ್ರಸ್ತುತ ಕರ್ನಾಟಕ ಸಹಕಾರಿ ಹಾಲುಉತ್ಪಾದಕರಮಹಾಮಂಡಳಿ ನಿಯಮಿತವು ಮಾಹೆಯಾನ ಸರಾಸರಿ 72000 ಮೆ.ಟನ್ ಪಶು ಆಹಾರವನ್ನು ಉತ್ಪಾದಿಸಿ ರಾಜ್ಯದ ಹೈನುಗಾರರಿಗೆ ಒಕ್ಕೂಟಗಳ ಮೂಲಕ ಸರಬರಾಜು ಮಾಡುತ್ತಿದ್ದು, ಕಹಾಮದ 05 ಸಂಖ್ಯೆ ಪಶು ಆಹಾರ ಘಟಕಗಳು ಹಾಗೂ



ಪಿಪಿಪಿ ಮಾದರಿಯ ಕಹಾಮ ಪಶು ಆಹಾರ ಘಟಕಗಳಿಂದ ಒಟ್ಟಾರೆ ವಾರ್ಷಿಕವಾಗಿ ಅಂದಾಜು 8.65 ಲಕ್ಷ ಮೆ.ಟನ್ ಪಶು ಆಹಾರವನ್ನು ರಾಜ್ಯದ ಹೈನುಗಾರರಿಗೆ ಸರಬರಾಜು ಮಾಡುತ್ತಿದ್ದು, ಕಹಾಮದ ಪಶು ಆಹಾರ ಘಟಕಗಳಿಗೆ ಮಾತ್ರ ವಾರ್ಷಿಕವಾಗಿ ಅಂದಾಜು 1.6 ಲಕ್ಷ ಮೆ.ಟನ್‌ಗಳಷ್ಟು ಮೆಕ್ಕೆಜೋಳದ ಅವಶ್ಯವಿರುತ್ತದೆ ಎಂದು ವಿವರಿಸಿದರು.

ಕಳೆದ2019–202ಸಾಲಿನಿಂದಲೂ ಪಶು ಆಹಾರ ಉತ್ಪಾದನೆಗೆ ಅವಶ್ಯವಿರುವಮೆಕ್ಕೆಜೋಳವನ್ನು ರೈತರ ಮುಖಾಂತರ 4ಜಿ ವಿನಾಯಿತಿ ಪಡೆದು ನೇರವಾಗಿ ಖರೀದಿಸಲಾಗುತ್ತಿದೆ.

ರೈತರಮುಖಾಂತರನೇರವಾಗಿ ಮೆಕ್ಕೆಜೋಳ ಖರೀದಿ ಸಂಬಂಧ 2023–24ನೇ ಸಾಲಿನ ಅಂತ್ಯಕ್ಕೆ 1.08 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನುಖರೀದಿಸಲಾಗಿದ್ದು, ಇದರ ಮೊತ್ತ ಅಂದಾಜು ರೂ.183.18 ಕೋಟಿಗಳನ್ನು ಸಂಬಂಧಪಟ್ಟ ರೈತರ 200 ನೇರವಾಗಿ ಡಿಬಿಟಿ ಮುಖಾಂತರ ಪಾವತಿಸಲಾಗಿರುತ್ತದೆ ಎಂದರು.

ಪ್ರಸಕ್ತಸಾಲಿಗೆಮೆಕ್ಕೆಜೋಳವನ್ನು ಎಂಎಸ್ ಪಿ ದರದಂತೆ ರೂ.2,225/– ಹಾಗೂ ರೂ.175/–ಗಳ ಪ್ರೋತ್ಸಾಹ ಧನದೊಂದಿಗೆಒಟ್ಟುರೂ.2,400/– ಪ್ರತಿ ಕ್ವಿಂಟಾಲ್‌ಗೆ ರೈತರಿಂದ ನೇರವಾಗಿ ಖರೀದಿಸಲು ಕಹಾಮ ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಲಾಗಿದೆ.

ಅದರಂತೆ ಯಥೇಚ್ಛವಾಗಿ ಮೆಕ್ಕೆಜೋಳ ಬೆಳೆಯುವ ರಾಜ್ಯದ ವಿವಿಧ ಭಾಗಗಳಲ್ಲಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕೇಂದ್ರಗಳನ್ನು ತೆರೆದು ರೈತರಿಂದ ನೇರವಾಗಿ ಖರೀದಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ. ಪ್ರಸ್ತುತ 4ಜಿ ವಿನಾಯಿತಿ ದೊರೆತ್ತಿದ್ದು, ಭಾರತ ಸರ್ಕಾರದ ನಿರ್ದೇಶನದಂತೆ 2024–25ನೇ ಸಾಲಿಗೆ ಮೆಕ್ಕೆಜೋಳ ಖರೀದಿಯ ಸಂದರ್ಭದಲ್ಲಿ ಬಯೋಮೆಟ್ರಿಕ್ ಕಡ್ಡಾಯಗೊಳಿಸಲಾಗಿರುತ್ತದೆ.

ಈ ಸಂಬಂಧ ಆಹಾರ ಮತ್ತು ನಾಗರಿಕ ಸೇವೆಗಳ ಇಲಾಖೆಯಿಂದ ನಿರೀಕ್ಷೆಯಲ್ಲಿದ್ದು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

## ಕ್ರಿಮಿನಲ್ ಜನಪ್ರತಿನಿಧಿಗಳ ನಿಷೇಧ ಕುರಿತ ವಿಚಾರಣೆಗೆ ಸುಪ್ರಿಂ ಸಮ್ಮತಿ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ,ಮಾ.5:ಕ್ರಿಮಿನಲ್ ಪ್ರಕರಣಗಳಲ್ಲಿಭಾಗಿಯಾಗಿದ್ದಾರೆ ಎನ್ನಲಾದ ಜನಪ್ರತಿನಿಧಿಗಳನ್ನು ರಾಜಕಾರಣದಿಂದ ನಿಷೇಧಿಸುವ ಕುರಿತಂತೆ ಕೈಗೊಳ್ಳಬೇಕಾದ ತೀರ್ಮಾನದ ಬಗ್ಗೆ ವಿಚಾರಣೆ ನಡೆಸಲು ಸುಪ್ರಿಂ ಕೋರ್ಟ್ ಸಮ್ಮತಿಸಿದೆ.

ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೆ ಅನುಸಾರವಾಗಿ ಯಾವುದೇ ಜನಪ್ರತಿನಿಧಿಗಳ ಅನರ್ಹತೆಯ ಅವಧಿಯನ್ನು ಕಡಿಮೆ ಮಾಡಿದ ಅಥವಾ ನಿಷೇಧಿಸಿರುವ ಬಗ್ಗೆ ಸುಪ್ರಿಂ ಕೋರ್ಟ್ ಚುನಾವಣಾ ಆಯೋಗದಿಂದ ಪ್ರತಿಕ್ರಿಯೆ ಕೋರಿದೆ. ಜನ ಪ್ರತಿನಿಧಿ ಕಾಯ್ದೆಯ ಸೆಕ್ಷನ್ 8 ಮತ್ತು 9ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಶಿಕ್ಷೆಗೊಳಗಾದ ಜನಪ್ರತಿನಿಧಿಗಳಿಗೆ ಜೀವಾವಧಿ ನಿಷೇಧ ಹೇರುವಂತೆ ಕೋರಿ ಬಿಜೆಪಿ ನಾಯಕರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಿಚಾರಣೆ ನಡೆಸುತ್ತಿದೆ.

ಸಂಸತ್ತುಮತ್ತುವಿಧಾನಸಭೆಗಳ ಶಿಕ್ಷೆಗೊಳಗಾದ ಸದಸ್ಯರಿಗೆ ಚುನಾವಣೆಯಲ್ಲಿಸ್ಪರ್ಧಿಸುವುದನ್ನು ಆಜೀವ ನಿಷೇಧಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ದೀಪಂಕರ್ ದತ್ತಾ ನೇತೃತ್ವದ ನ್ಯಾಯಪೀಠ, ಈ ಮಾಹಿತಿಯು ನ್ಯಾಯದ ಹಿತದೃಷ್ಟಿಯಿಂದ ಕೂಡಿದೆ ಎಂದು ಹೇಳಿದೆ.

ಏಕೆಂದರೆ ಈ ಹಿಂದೆ, 1977 ರಲ್ಲಿ ಚುನಾವಣಾ ಆಯೋಗವು ಜನ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 11 ರ ಅಡಿಯಲ್ಲಿ ತನ್ನ ಅಧಿಕಾರವನ್ನು ಬಳಸಿದ ಎರಡು ದಾಖಲಿತ ನಿದರ್ಶನಗಳಿವೆ.

## ಇಬ್ಬರು ಕಂದಾಯ ಅಧಿಕಾರಿಗಳು ಲೋಕಾಯುಕ್ತ ಬಲೆಗೆ





ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮಾ.5:ಮೂವತ್ತು ಸಾವಿರರೂ.ಲಂಚಸ್ವೀಕರಿಸುವಾಗ ಇಬ್ಬರುಕಂದಾಯಅಧಿಕಾರಿಗಳು ಲೋಕಾಯುಕ್ತಬಲೆಗೆಬಿದ್ದಿರುವ ಘಟನೆ ಕಲಬುರಗಿ ತಾಲ್ಲೂಕಿನ ಉಪತಹಶೀಲ್ದಾರ್ ಕಚೇರಿಯಲ್ಲಿ ನಡೆದಿದೆ.

ಮೇಲಕುಂದಾ (ಬಿ) ಗ್ರಾಮದ ಗ್ರಾಮಾಧಿಕಾರಿ ಡಾ.ಕಾಂತೇಶ್ ಮತ್ತು ಅಖಾತರ್ ಪಟೇಲ್ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದ ಕಂದಾಯ ಅಧಿಕಾರಿಗಳು.

(2ನೇ ಪುಟ ನೋಡಿ)

## ಸರಸ್ ಮೇಳದಲ್ಲಿ ೨೬ ಲಕ್ಷಗಳ ವಹಿವಾಟು ನಡೆಸಿದ ಸ್ವ ಸಹಾಯ ಸಂಘಗಳು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮಾ.4:

ಸರಸ್ ಮೇಳದಲ್ಲಿ 220 ಮಳಿಗೆಗಳಲ್ಲಿ ಸ್ವಸಹಾಯ ಸಂಘಗಳ ಸದಸ್ಯರು ತಮ್ಮ ಉತ್ಪನ್ನಗಳ ಮಾರಾಟ ಮಾಡಿ 96 ಲಕ್ಷಗಳ ವಹಿವಾಟು ನಡೆಸಿವೆ ಎಂದು ಪ್ರಾದೇಶಿಕ ಆಯುಕ್ತ ಕೃಷ್ಣ ಬಾಜಪೇಯ ಅವರು ಹೇಳಿದರು.



ಕಲಬುರಗಿ ನಗರದ ಶ್ರೀ ಶರಣಬಸವೇಶ್ವರ ಜಾತ್ರಾ ಮೈದಾನದಲ್ಲಿ ಕಳೆದ ಫೆಬ್ರವರಿ 24 ರಿಂದ ಆರಂಭಗೊಂಡಿರುವ ಮಾರ್ಚ 5 ರವರೆಗೆ ನಡೆಯುವ ರಾಷ್ಟ್ರಮಟ್ಟದ ಬೃಹತ್ ನಮ್ಮ ಸರಸ್ ಮೇಳ–2025 ಸಮಾರೋಪದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಹತ್ತು ದಿನದ ಕಾರ್ಯಕ್ರಮ ಯಶಸ್ವಿಯಾಗಿದ್ದು,

(2ನೇ ಪುಟ ನೋಡಿ)

## ರಾಜ್ಯದಲ್ಲಿರುವುದು ಅಸಮರ್ಥ ಸರ್ಕಾರ:ಕಾರಜೋಳ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಮಾ.5:ಈಗರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವುದು ಅಸಮರ್ಥ ಸರ್ಕಾರ ಎಂದು ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಟೀಕಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಆಗಿರುವ ಅಭಿವೃದ್ಧಿ ಶೂನ್ಯ.



ಈ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 3400 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 50 ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ.

1100 ನವಜಾತ ಶಿಶುಗಳು ಸರಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿವೆ. 12 ಕಂಟ್ರ್ಯಾಕ್ಟರ್ ಗಳು ಬಿಲ್ ಮಾಡಿಲ್ಲ ಎಂದು ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈ ಸರ್ಕಾರದಿಂದ ನೀರಾವರಿಗೆ ನಯಾಪೈಸೆ

(2ನೇ ಪುಟ ನೋಡಿ)

## ವರ್ಷದೊಳಗೆ ಮುಜರಾಯಿ ದೇವಾಲಯಗಳ ಆಸ್ತಿ ಇಂಡೀಕರಣ: ರಾಮಲಿಂಗಾರೆಡ್ಡಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಮಾ.5:ಮುಜರಾಯಿ ದೇವಾಲಯಗಳಲ್ಲಿ ಬಾಕಿ ಇರುವ ಆಸ್ತಿ ಇಂಡೀಕರಣವನ್ನು ಇನ್ನೊಂದು ವರ್ಷದಲ್ಲಿ ಪೂರ್ಣ ಮಾಡುವುದಾಗಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಅಬ್ದುಲ್ ಜಬ್ಬರ್ ಈ ಬಗ್ಗೆ ಪ್ರಶ್ನೆ



ಕೇಳಿದರು. ಇದಕ್ಕೆ ಉತ್ತರ

(2ನೇ ಪುಟ ನೋಡಿ)

## ಹಂತ-ಹಂತವಾಗಿ ಕಾಮಗಾರಿಗಳ ಬಾಕಿ ಬಿಲ್ಲುಗಳ ಪಾವತಿ: ಸಚಿವ ಸತೀಶ್ ಜಾರಕಿಹೊಳಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಮಾ.05 :ಲೋಕೋಪಯೋಗಿ ಇಲಾಖೆಯಲ್ಲಿ ಫೆಬ್ರವರಿ 2025ರ ಅಂತ್ಯಕ್ಕೆ ರೂ.8925.01 ಕೋಟಿ ಮೊತ್ತದ ಬಿಲ್ಲುಗಳು ಪಾವತಿಗೆ ಬಾಕಿ ಇರುತ್ತವೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ತಿಳಿಸಿದರು.



ವಿಧಾನಪರಿಷತ್ತಿನ ಪ್ರಶ್ನೋತ್ತರದ ವೇಳೆಯಲ್ಲಿಂದು ಸದಸ್ಯರಾದ ಶರವಣ ಟಿ.ಎ. ಅವರ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಸಚಿವರು, 2024–25ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ರಾಜ್ಯ ಸರ್ಕಾರ 10023.40 ಕೋಟಿ ಅನುದಾನ ಒದಗಿಸಿದ್ದು, ಪ್ರಸ್ತುತ ಅನುದಾನದಲ್ಲಿ ಫೆಬ್ರವರಿ ಮಾಹೆಯ ಅಂತ್ಯಕ್ಕೆ ರೂ. 8392.65 ಕೋಟಿ

(2ನೇ ಪುಟ ನೋಡಿ)

## ರಾಯಚೂರ ಬೆಳವಣಿಗೆ ಕೇಂದ್ರದ ಮುಖ್ಯ ರಸ್ತೆಯನ್ನು ಮೇಲ್ದರ್ಜೆಗೇರಿಸಲು ಕ್ರಮ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮಾ.05: ರಾಯಚೂರ ಬೆಳವಣಿಗೆ ಕೇಂದ್ರದ ಮುಖ್ಯ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ 167ರಿಂದ ಮೊದಲ್ಗೊಂಡು 1500 ಮೀಟರವರೆಗೆ ಸುಮಾರು 10 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು 2024ರ ಆಗಸ್ಟ್ 22ರಂದು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರಾದ ಎಂ.ಬಿ.ಪಾಟೀಲ ಅವರು ತಿಳಿಸಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಎ ವಸಂತಕುಮಾರ ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ರಾಯಚೂರ ಜಿಲ್ಲೆಯಲ್ಲಿ ಕೆಐಎಡಿಬಿಯಿಂದ ಅಭಿವೃದ್ಧಿಪಡಿಸಲಾದ ರಾಯಚೂರಿನ 155.88 ಎಕರೆ ವಿಸ್ತೀರ್ಣದ ಕೈಗಾರಿಕಾ ಪ್ರದೇಶದಲ್ಲಿ, ದೇವಸಗೂರಿನ 214.86 ಎಕರೆ ವಿಸ್ತೀರ್ಣದ ಕೈಗಾರಿಕಾ ಪ್ರದೇಶದಲ್ಲಿ, ರಾಯಚೂರಿನ ಬೆಳವಣಿಗೆ ಕೇಂದ್ರದ 1745.31 ಎಕರೆ ವಿಸ್ತೀರ್ಣದ ಕೈಗಾರಿಕಾ ಪ್ರದೇಶದಲ್ಲಿ, ಯರಮರಸ್‌ನ 41.63 ಎಕರೆ ವಿಸ್ತೀರ್ಣದ ಕೈಗಾರಿಕಾ ಪ್ರದೇಶದಲ್ಲಿ ಮತ್ತು ಮಾನ್ವಿಯ 59.7 ಎಕರೆ ವಿಸ್ತೀರ್ಣದ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು 2801–07 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂ ಸ್ವಾಧೀನವಾದ ಈ ಜಮೀನನ್ನು ಮಂಡಳಿಯ ವಶಕ್ಕೆ ಪಡೆಯಲಾಗಿದೆ. ಇವೆಲ್ಲವೂ ಹಳೆಯ ಕೈಗಾರಿಕಾ ಪ್ರದೇಶಗಳಾಗಿದ್ದು ಇಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗಿದೆ. ಈ ಪೈಕಿ ರಾಯಚೂರ ಬೆಳವಣಿಗೆ ಕೇಂದ್ರದ ಮುಖ್ಯ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ 167ರಿಂದ ಮೊದಲಗೊಂಡು 1500 ಮೀಟರವರೆಗೆ ಮೇಲ್ದರ್ಜೆಗೇರಿಸಲು ಕಾರ್ಯಾದೇಶ ನೀಡಲಾಗಿದ್ದು, ಉಳಿದಂತೆ ಕಳೆದ 5 ವರ್ಷಗಳಲ್ಲಿ ಇತರೆ ಕೈಗಾರಿಕಾ ಪ್ರದೇಶಗಳಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ ಎಂದು ಸಚಿವರಾದ ಎಂ.ಬಿ.ಪಾಟೀಲ ಅವರು ವಿಧಾನ ಪರಿಷತ್ ಸದಸ್ಯರಾದ ಎ ವಸಂತಕುಮಾರ ಅವರ ಚುಕ್ಕೆಗುರುತಿಲ್ಲದ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದಾರೆ.

## ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಆದ್ಯತೆ:ಸಂಸದ ಸಾಗರ ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮಾ.5: ರಾಜ್ಯ ಮತ್ತು ಕೇಂದ್ರ ಸರಕಾರದ ವಿವಿಧ ಯೋಜನೆಯಡಿ ಅನುದಾನ ಮಂಜೂರಾತಿ ಮಾಡಿಸಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಸಂಸದ ಸಾಗರ ಖಂಡ್ರೆ ಹೇಳಿದರು.

ತಾಲುಕಿನ ವಿವಿಧೆಡೆ ಬುಧವಾರ ವಿವಿಧ ಯೋಜನೆಯಡಿ ಸುಮಾರು 15.65 ಕೋಟಿ ರೂ ಅನುದಾನದ ರಸ್ತೆ, ಚರಂಡಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ರಾಜ್ಯದಲ್ಲೇ ಬೀದರ್ ಮಾದರಿ ಜಿಲ್ಲೆಯನ್ನಾಗಿಸುವ ಗುರಿ ಹೊಂದಿದ್ದೇನೆ. ನಾನು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಸೇರಿ ಜಿಲ್ಲೆಯ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿವೆ.

ತಾಲೂಕಿನ ಗ್ರಾಮೀಣ ಭಾಗದ ವಿವಿಧೆಡೆ ರಸ್ತೆ, ಚರಂಡಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದೇನೆ. ಗುಣಮಟ್ಟದ ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಅಶೋಕರಾವ ಕಣಜಿಕರ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಡಿವಾಳಪ್ಪ ಮಂಗಲಗಿ, ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಲಿಂಗರಾಜ ಖಂಡಾಳೆ, ಶಿವರಾಜ ಬಾಜೋಳಗಾ ಸೇರಿದಂತೆ ಹಲವರು ಇದ್ದರು.

ಭಾಲ್ಕಿ ತಾಲೂಕಿನ ಅಭಿವೃದ್ಧಿ ಕಾಮಗಾರಿಗಳಿಗೆ ಸಂಸದ ಸಾಗರ್ ಈಶ್ವರ್ ಖಂಡ್ರೆ ಚಾಲನೆ 16.65 ಕೋಟಿ ಮೌಲ್ಯದ ಕಾಮಗಾರಿಗಳಿಗೆ ಚಾಲನೆ

ಭಾಲ್ಕಿ ತಾಲೂಕಿನ ವಿವಿಧ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ

(2ನೇ ಪುಟ ನೋಡಿ)

## ಒಂದನೇ ಪುಟದಿಂದ

## ಅಭಿವೃದ್ಧಿಗೆ ಆದ್ಯತೆ:ಸಂಸದ ಸಾಗರ ಖಂಡ್ರೆ

ಸಂಸದ ಶ್ರೀ ಸಾಗರ್ ಈಶ್ವರ್ ಖಂಡ್ರೆ ಅವರು ಇಂದು ಶಂಕುಸ್ಥಾಪನೆ ನೆರವೇರಿಸಿದರು. ಸುಮಾರು 16.65 ಕೋಟಿ ಮೊತ್ತದ ಈ ಕಾಮಗಾರಿಗಳು ಭಾಗಿಯಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಸಂಪರ್ಕ ಸುಧಾರಣೆ ಮತ್ತು ಮೂಲಭೂತ ಸೌಲಭ್ಯಗಳ ವೃದ್ಧಿಗೆ ಮಾರ್ಗಸೂಚಿಯಾಗಲಿವೆ.

**ಕಾಮಗಾರಿಗಳ ವಿವರ:**ಬಾಜೋಳಗಾ–ಕಪಲಾಪೂರ ರಸ್ತೆಯ ಸುಧಾರಣೆ–100 ಲಕ್ಷ ರೂ, ಬಾಜೋಳಗಾ– ನವದಗಿ ತಾಂಡಾ ರಸ್ತೆಯ ಸುಧಾರಣೆ–100 ಲಕ್ಷ ರೂ, ಬಾಜೋಳಗಾ ಎಸ್.ಸಿ ವಾರ್ಡ್ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ–35 ಲಕ್ಷ ರೂ, ಎಸ್.ಟಿ ವಾರ್ಡ್ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ 30 ಲಕ್ಷ ರೂ, ಬಾಜೋಳಗಾ ವರವಟ್ಟಿ ರಸ್ತೆ ಸೇತುವೆ–250 ಲಕ್ಷ ರೂ, ರಾಮತೀರ್ಥವಾಡಿ–ಭಾಲ್ಕಿ ರಸ್ತೆ ಸುಧಾರಣೆ–160 ಲಕ್ಷ ರೂ, ಬಾಳೂರು – ಹಾಲಹಿಪ್ಪರ್ಗಾ ಕ್ರಾಸ್ ರಸ್ತೆ ಸುಧಾರಣೆ 450 ಲಕ್ಷ ರೂ, ವಳಸಂಗ್–ಬೀರಿ–ನಾಗರಾಳ, ಕೂಡ್ಲಿ, ನಿಟ್ಟೂರು, 440 ಲಕ್ಷ ರೂ ವೆಚ್ಚ ಸೇರಿ ಒಟ್ಟು 15.65 ಕೋಟಿ ರೂ ಅನುದಾನದ ಕಾಮಗಾರಿಗೆ ಸಂಸದ ಖಂಡ್ರೆ ಚಾಲನೆ ನೀಡಿದರು.

## ಅಸಮರ್ಥ ಸರ್ಕಾರ:ಕಾರಜೋಳ

ಹಣ ಬಿಡುಗಡೆಯಾಗಿಲ್ಲ.ಹೀಗಾಗಿ ಸಿದ್ದರಾಮಯ್ಯ ನೇತೃತ್ವದಲ್ಲಿ ಅತ್ಯಂತ ಕೆಟ್ಟ ಸರ್ಕಾರ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದೆ ಎಂದರು.ಈ ಸರ್ಕಾರದಿಂದ ಕುಡಿಯಲು ನೀರು ಸಹ ಕೊಡಲು ಆಗಿಲ್ಲ.ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಬರೀ ಭಾಷಣ ಮಾಡುತ್ತಾರೆ. ಇನ್ನೊಂದೆಡೆ ಎಲ್ಲ ವಸ್ತುಗಳ ದರ ಹೆಚ್ಚಾಗಿ ಜನರು ಪರದಾಡುತ್ತಿದ್ದಾರೆ ಎಂದು ಆರೋಪ ಮಾಡಿದರು.ಎಸ್ಸಿ–ಎಸ್ಟಿ ಸಮುದಾಯದ ಪಾಲಿನ ಹಣವನ್ನು ಸಹ ರಾಜ್ಯ ಸರ್ಕಾರ ಗುತ್ತಿಗೆ ಪಡೆದಂತೆ ವರ್ತಿಸುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡು ವರ್ಷವಾದರೂ ಅಭಿವೃದ್ಧಿಯಾಗಿಲ್ಲ.ದಲಿತರನ್ನು ಭಿಕ್ಷುಕರನ್ನಾಗಿ ಮಾಡಲು ಹೊರಟಿದೆ ಎಂದರು.ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗ ಎಸ್ಸಿ– ಎಸ್ಟಿ ಜನರ ಉದ್ಧಾರ ಮಾಡುವುದಾಗಿ ಹೇಳಿದ್ದರು. ಆದರೆ ಅವರು ನುಡಿದಂತೆ ನಡೆದಿಲ್ಲ. ಸಿಎಂ ಸಿದ್ದರಾಮಯ್ಯ ಬರೀ ಎಸ್ಸಿ–ಎಸ್ಟಿ ಜನರ ಓಟು ಪಡೆಯಲು ಹುನ್ನಾರ ನಡೆಸುತ್ತಿದ್ದಾರೆ. ಹೀಗಾಗಿ ಸರಕಾರದ ವಿರುದ್ಧ ರಾಜ್ಯಾದ್ಯಂತ ಹೋರಾಟ ಮಾಡಲಾಗುವುದು ಎಂದರು.

## ಬಿಲ್ಲುಗಳ ಪಾವತಿ: ಸಚಿವ ಸತೀಶ್ ಜಾರಕಿಹೊಳಿ

ಅನುದಾನ ಬಿಡುಗಡೆ ಮಾಡಿ ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲಾಗಿದೆ.

ಸದರಿ ಬಾಕಿ ಬಿಲ್ಲುಗಳ ತೀರುವಳಿಗೆ ಪ್ರಸಕ್ತ ಸಾಲಿಗೆ ಒದಗಿಸಿರುವ ಅನುದಾನ ಹಾಗೂ ಮುಂದೆ ಒದಗಿಸಲಾಗುವ ಅನುದಾನದ ಲಭ್ಯತೆಯನ್ನಾಧರಿಸಿ ಹಂತ–ಹಂತವಾಗಿ ಕಾಮಗಾರಿಗಳ ಬಾಕಿ ಬಿಲ್ಲುಗಳನ್ನು ಪಾವತಿಸಲಾಗುವುದು ಎಂದು ಸದನಕ್ಕೆ ತಿಳಿಸಿದರು.

## ವಹಿವಾಟು ನಡೆಸಿದ ಸ್ವ ಸಹಾಯ ಸಂಘಗಳು

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಹಾಗೂ ಮಹಾನಗರ ಪಾಲಿಕೆ ಎಲ್ಲಾ ಅಧಿಕಾರಿಗಳ ಸಹಕಾರದಿಂದ ಕಲಬುರಗಿ ಜಿಲ್ಲೆಯಿಂದ ಹೊರ ರಾಜ್ಯಗಳಿಂದ ಎಲ್ಲ ಸ್ವಹಾಯ ಸಂಘಗಳು ಭಾಗವಹಿಸಿ ಯಶಸ್ವಿ ಕಂಡಿತು ಎಂದರು. ಭಾರತ ದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆ ಇದ್ದು ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಬೇಕಾದರೆ ಉದ್ಯಮಶೀಲತೆಗೆ ಬಹಳ ಗೌರವ ಮಹತ್ವ ಇದೆ ಸ್ವಸಹಾಯ ಸಂಘಗಳ ಸದಸ್ಯರು ಸರಿಯಾದ ಕಾರ್ಯ ಯೋಜನೆಗಳ ಮೂಲಕ ವಸ್ತುಗಳ ಉತ್ಪಾದನೆ ಮಾಡಿ ಹೆಚ್ಚಿನ ಆದಾಯ ಗಳಿಸಿ ಸ್ವಾವಲಂಬನೆ ಜೀವನವನ್ನು ಸಾಗಿಸಬಹುದು ಎಂದು ಹೇಳಿದರು. ಪ್ರತಿವರ್ಷ ಸರಸ್ ಮೇಳ ಆಯೋಜನೆ ಮಾಡುವ ಉದ್ದೇಶವಿದ್ದು, ಮುಂದಿನ ಸರಸ್‌ಮೇಳದಲ್ಲಿ 3 ಕೋಟಿ ರೂ ವಹಿವಾಟು ಗುರಿ ಇದೆ ಎಂದು ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,ಮಹಾನಗರ ಪಾಲಿಕೆ,

ಜಿಲ್ಲಾ ಪೋಲಿಸ್ ಇಲಾಖೆ ಜನಪ್ರತಿನಿಧಿಗಳ ಸಹಕಾರದಿಂದ ಸರಸ್‌ಮೇಳವು ಯಶಸ್ವಿಯಾಯಿತು ಎಂದು ಹೇಳಿದರು. ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಭಂವರ ಸಿಂಗ್ ಮೀನಾ ಮಾತನಾಡಿ, ಕಲಬುರಗಿ ಜಿಲ್ಲೆಯ ಎಲ್ಲ ಸ್ವಸಹಾಯ ಸಂಘಗಳು ಸರಸ್ ಮೇಳದಲ್ಲಿ ಭಾಗವಹಿಸಿ ಸ್ವಸಹಾಯ ಸಂಘದ ಸದಸ್ಯರು ಹೆಚ್ಚಿನ ಆದಾಯಗಳಿಸಿದ್ದಾರೆ ಕಲಬುರಗಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಸರಸ್ ಮೇಳ ಆಯೋಜನೆ ಮಾಡಿದ್ದು, ಕಲಬುರಗಿ ಜಿಲ್ಲೆಯ ತಾಲೂಕಿನ ಮತ್ತು ಹೊರರಾಜ್ಯಗಳಿಂದ ಸ್ವಸಹಾಯ ಸಂಘದ ಸದಸ್ಯರು ಸರಸ ಮೇಳದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ರಾಷ್ಟ್ರಮಟ್ಟದಕಾರ್ಯಕ್ರಮ ಯಶಸ್ವಿಗೊಳಿಸಲು ಜನವರಿಯಿಂದ ಕಾರ್ಯಕ್ರಮದ ಪೂರ್ವ ಸಿದ್ಧತೆ ಮಾಡಿಕೊಂಡಿದ್ದೇವು ಸ್ವ ಸಹಾಯ ಸಂಘ ಸದಸ್ಯರಿಗೆ ಪ್ರತಿದಿನ ಮಧ್ಯಾಹ್ನ ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯಾಗಾರ ಹಮ್ಮಿಕೊಂಡು ಅವರಿಗೆ ತಿಳುವಳಿಕೆ ನೀಡಲಾಯಿತು ಎಂದರು. ಸ್ವಸಹಾಯ ಸಂಘದ ಸದಸ್ಯರಿಗೂ ವಸತಿ ಮತ್ತು ಸಾರಿಗೆ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಲಾಯಿತು.

ಗ್ರಾಮೀಣ ಮತ್ತು ನಗರ ಪ್ರದೇಶಗಳ ಮಹಿಳಾ ಸ್ವ–ಸಹಾಯ ಗುಂಪುಗಳು ತಯಾರಿಸುವ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಒಂದು ಬೃಹತ್ ವೇದಿಕೆಯನ್ನು ಕಲಬುರಗಿಯಲ್ಲಿ ಕಲ್ಪಿಸಿದ್ದು, ಪ್ರತಿದಿನ ಬೆಳಗ್ಗೆ 10.30 ರಿಂದ ರಾತ್ರಿ 9.30 ಗಂಟೆವರೆಗೆ ಮಳಿಗೆಗಳು ತೆರೆಯಲಾಗಿತ್ತು ಎಂದರು. ಮಹಾನಗರ ಪಾಲಿಕೆ ಆಯುಕ್ತರಾದ ಅವಿನಾಶ ಶಿಂಧೆ ಅವರು ಮಾತನಾಡಿದರು.

ಬೆಂಗಳೂರಿನ ಕೇಂದ್ರ ಕಚೇರಿ ಯೋಜನಾ ಅಧಿಕಾರಿ ಶ್ರೀಮತಿ ರಾಘವಿ ನಾಯಕ ಪ್ರಸ್ತಾವಿಕವಾಗಿ ಮಾತನಾಡಿ, 20 ಲೈವ್ ಫುಡ್ ಸ್ಟಾಲ್ ಅಲ್ಲದೆ ನಮ್ಮ ಸರಸ್ ಮೇಳದಲ್ಲಿ ಒಂದೇ ಸೂರಿನಡಿ 230 ಮಳಿಗೆಗಳನ್ನು ಹಾಕಲಾಗಿದೆ. ಪ್ರಮುಖವಾಗಿ ಬಿದರಿ ಕಲೆ, ಚನ್ನಪಟ್ಟಣ ಗೊಂಬೆ, ಕಿನ್ನಾಳ ಆಟಿಕೆ, ಇಳಕಲ್ ಸೀರೆ, ಮೈಸೂರು ಇನ್ಲೇ, ಚಿಕ್ಕಬಳ್ಳಾಪುರ ಲೆದರ್ ಪಪ್ಪೆಟ್, ಲಂಬಾಣಿ ಕುಸುರಿ ಕಲೆ, ಖಾದಿ ಬಟ್ಟೆಗಳು, ಮಲೆನಾಡಿನ ಉಪ್ಪಿನಕಾಯಿ,

ಹ್ಯಾಂಡ್ ಲೂಮ್ ಸೀರೆಗಳು, ಟೆರಿಕೋಟ್ ಆಭರಣಗಳು, ಹೋಂ ಮೇಡ್ ಸೌಂದರ್ಯ ವರ್ಧಕಗಳು, ಹರ್ಬಲ್ ಸೋಪ್ ಗಳು, ಸ್ಯಾನಿಟರಿ ನ್ಯಾಪ್ಕಿನ್ಸ್, ಸೆಣಬಿನ ಬ್ಯಾಗ್ ಗಳು ಹೀಗೆ ರಾಜ್ಯದ 30 ಜಿಲ್ಲೆಯ 200ಕ್ಕೂ ಹೆಚ್ಚು ಮಳಿಗೆಗಳಿವೆ. ಇನ್ನೂ 10 ಹೊರ ರಾಜ್ಯಗಳಿಂದ ಆಗಮಿಸಿರುವ ಮಹಿಳಾ ಸ್ವ–ಸಹಾಯ ಗುಂಪುಗಳು ಇಲ್ಲಿ ಮಳಿಗೆ ತೆರೆದಿದ್ದು ವಿಶೇಷವಾಗಿದೆ ಎಂದರು ಇದೇ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಶ್ರೀ ಕಾಳಿಕಾಂಬ ಸ್ವಸಹಾಯ ಗುಂಪು, ಬ್ರಾಂಡಿಂಗ್ ಮತ್ತು ಪ್ಯಾಕೇಜಿಂಗ್, ಚೆರಿ ಮಿಲೆಟ್ ಮಿಕ್ಸ್‌ಸ್ಸಿ, ಪ್ರಥಮ ಸ್ಥಾನ, ಚಿಕ್ಕಬಳ್ಳಾಪೂರ ಶ್ರೀ ಲಕ್ಷ್ಮೀ ಮಹಿಳಾ ಸ್ವ ಸಹಾಯ ಗುಂಪು, ತೊಕ್ಕುಗಳು ಹಾಗೂ ಜ್ಯಾಮ್ಗಳು ದ್ವಿತೀಯ ಸ್ಥಾನ, ತುಮಕೂರು, ಜ್ಞಾನಭಾರತಿ ಮಹಿಳಾ ಸ್ವ ಸಹಾಯ ಗುಂಪು ನೈಸರ್ಗಿಕ ಸೀಗೆಕಾಯಿ ಹಾಗೂ ಕೇಶ ಉತ್ಪನ್ನಗಳ ತೃತೀಯ ಸ್ಥಾನ ಪಡೆದರು.

## ಇಂದು ಬಿಜೆಪಿಯಿಂದ ಹಲಗಿ ಮಜಲಿನ ಸ್ಪರ್ಧೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.5– ಐತಿಹಾಸಿಕ ಹೋಳಿ ಹಬ್ಬದ ನಿಮಿತ್ತ ಭಾರತೀಯ ಜನತಾ ಪಾರ್ಟಿ ನಗರ ಮಂಡಲ ಯುವ ಮೋರ್ಚಾದಿಂದ ನಗರದಲ್ಲಿ ಮಾ.6 ರಂದು ಹಲಗಿ ಮಜಲಿನ ಸ್ಪರ್ಧೆ ಜರುಗಲಿದೆ.

ಗುರುವಾರ ನಗರದ ಬಸವೇಶ್ವರವೃತ್ತದಬಳಿಯಿರುವ ಆಂಜನೇಯ ದೇವಸ್ಥಾನದ ಹತ್ತಿರ ಸ್ಪರ್ಧೆ ನಡೆಯಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ವಹಿಸುವರು. ಸಂಸದ ಪಿ.ಸಿ.ಗದ್ದಿಗೌಡರ ಹಲಗಿ ಮೇಳವನ್ನು ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ರಾಜ್ಯಸಭಾಸದಸ್ಯನಾರಾಯಣಸಾ ಭಾಂಡಗೆ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ.ಪಾಟೀಲ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ವೆಂಕಪ್ಪ ಸುಗತೇಕರ, ಮಹಾಬಳೇಶ ಗುಡಗುಂಟಿ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಸಹ ಪ್ರಭಾರಿ ಬಸವರಾಜ ಯಂಕಂಚಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಉಪಾಧ್ಯಕ್ಷೆ ಶೋಭಾ ರಾವ, ಯಲ್ಲಪ್ಪ ನಾರಾಯಣಿ,ರಾಜು ರೇವಣಕರ,ಅಶೋಕಲಿಂಬಾವಳಿ, ಚಂದ್ರು ರಾಮವಾಡಗಿ ಭಾಗವಹಿಸುವರು.

## ಅಧಿಕಾರಿಗಳು ಲೋಕಾಯುಕ್ತ ಬಲೆಗೆ

ಮೋಟೇಶನ್ ಮತ್ತು ಪಾಣಿ ಹೆಸರು ಸೇರ್ಪಡೆ ಮಾಡುವುದಕ್ಕೆ ಸಿದ್ದರಾಮಯ್ಯ ಎಂಬುವವರಿಗೆ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಖಚಿತ ಮಾಹಿತಿ ಪಡೆದ ಪೊಲೀಸರು, ಅಧಿಕಾರಿಗಳನ್ನು ರೆಡ್ ಹ್ಯಾಂಡ್ ಆಗಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.ಕಲಬುರಗಿ ಲೋಕಾಯುಕ್ತ ಎಸ್.ಪಿ ಬಿಕೆ.ಉಮೇಶ್ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ಇನ್ ಸ್ಪೆಕ್ಟರ್ ಅಕ್ಕಮಹಾದೇವಿ ಹಾಗೂ ಸಿಬ್ಬಂದಿಗಳಾದ ಮಲ್ಲಿನಾಥ್. ರಾಣೋಜಿ, ಬಸವರಾಜ್, ಅಸ್ಲಾಂ, ಯಮನೂರ ಯಮನೂರಪ್ಪ, ಪೈಮೊದಿನ್, ಸೇರಿದಂತೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

## ಆಸ್ತಿ ಇಂಡೀಕರಣ: ರಾಮಲಿಂಗಾರೆಡ್ಡಿ

ನೀಡಿದ ಸಚಿವ ರಾಮಲಿಂಗಾರೆಡ್ಡಿ,ಮುಜರಾಯಿ ದೇವಾಲಯಗಳ ಆಸ್ತಿ ರಕ್ಷಣೆ ಮತ್ತು ಇಂಡೀಕರಣ ಮಾಡುವ ಪ್ರಕ್ರಿಯೆ ಶುರುವಾಗಿದೆ. 2023 ಮತ್ತು 2024 ರಲ್ಲಿ 11,498 ಎಕರೆ ಆಸ್ತಿಯನ್ನ ದೇವಾಲಯಗಳ ಹೆಸರಿಗೆ ಪಹಣಿ ಇಂಡೀಕರಿಸಲಾಗಿದೆ. ಸುಮಾರು 15,413 ಎಕರೆ ಆಸ್ತಿಯನ್ನು ದೇವಾಲಯಗಳನ್ನು ದೇವಾಲಯಗಳ ಹೆಸರಿಗೆ ಇಂಡೀಕರಣ ಮಾಡಲಾಗಿದೆ ಎಂದು ತಿಳಿಸಿದರು.ಇನ್ನೂ 20 ಸಾವಿರ ಎಕರೆ ದೇವಾಲಯಗಳ ಜಾಗ ಇಂಡೀಕರಣ ಮಾಡಬೇಕು.ಈಗಾಗಲೇ ಪ್ರಕ್ರಿಯೆ ಶುರುವಾಗಿದೆ. ಇನ್ನೊಂದು ವರ್ಷದಲ್ಲಿ ಬಾಕಿ ಇರೋ ಎಲ್ಲಾ ದೇವಾಲಯಗಳ ಆಸ್ತಿ ಇಂಡೀಕರಣ ಮಾಡುತ್ತೇವೆ ಅಂತ ಭರವಸೆ ನೀಡಿದರು.

GOVERNEMENT OF KARANTAKA
DISTRICT HEALTH AND FAMILY WELFARE DEPARTMENT, BALLARI.
DISTRICT SURVEILLANCE UNIT, BALLARI
O/o The District Surveillance Officer, District Hospital Premises, Dr.Rajkumar, Road, Ballari-583101.
Contact No. +91 80501 34236 / e-Mail ID: dsubellary@gmail.com

No.DSU/CPHC-UHC/81/2024-25 Date 01.03.2025

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ ವ್ಯಾಪ್ತಿಯಲ್ಲಿ ಒಳಗೊಂಡಿರುವ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಇಲ್ಲಿಗೆ ಸಿ.ಪಿ.ಹೆಚ್.ಸಿ–ಯು.ಹೆಚ್.ಸಿ ಕಾರ್ಯಾಕ್ರಮದ ಅಡಿಯಲ್ಲಿ ವಿವಿಧ 86 ಉಪಕೇಂದ್ರ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಅವಶ್ಯವಿರುವ ಲೇಖನ ಮತ್ತು ಮುದ್ರಣ ಸಾಮಾಗ್ರಿಗಳನ್ನು 15ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ (15th Finance Commission Fund) ಖರೀದಿಸಲು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಈ ಟೆಂಡರ್ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ http://e-proc.karnataka.gov.in ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯವಿರುತ್ತದೆ.

ಒಟ್ಟು 86 ಆರೋಗ್ಯ ಕ್ಷೇಮ ಕೇಂದ್ರಗಳಿಗೆ ಅವಶ್ಯವಿರುವ ವೈದ್ಯಕೀಯ ಸಾಧನ ಸಲಕರಣೆ& ಇತರೇ ಸಾಮಾಗ್ರಿಗಳನ್ನು ಖರೀದಿಸಲು – ಅನ್ ಲೈನ್‌ಮೂಲಕ ಇ–ಟೆಂಡರ್ ಅಪ್ಲೋಡ್ ಮಾಡಲು ಕೊನೆಯ ದಿನಾಂಕ 10.03.2025 @ 17.00 ಗಂಟೆಯವರೆಗೆ ನಿಗಧಿಪಡಿಸಲಾಗಿದೆ ಇ–ಟೆಂಡರ್ ಮೊತ್ತ ರೂ.11.87 ಲಕ್ಷಗಳು – TENDER INDENT No.DHFWS/2024-25/IND1441

ಸಹಿ/– ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಬಳ್ಳಾರಿ.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/990/ಕೆಎಸ್‌ಎಂಸಿಎ/2024–25

## ಮಹಿಳೆಯರಿಗೆ ಎಲ್ಲ ಕ್ಷೇತ್ರಗಳಲ್ಲಿ ಅವಕಾಶ ಸಿಗಲಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 05 : ಮಹಿಳೆಯರಿಗೆಎಲ್ಲಕ್ಷೇತ್ರಗಳಲ್ಲೂ ಅವಕಾಶ ಸಿಗಬೇಕು ಎಂದು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ವಿಭಾಗದ ಮುಖ್ಯಸ್ಥೆ ಪ್ರೊ. ವಿದ್ಯಾ ಪಾಟೀಲ ಹೇಳಿದರು.

ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ಬುಧವಾರ ಆಯೋಜಿಸಿದ್ದ ಲಿಂಗ ಮತ್ತು ಸಮಾನತೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಸ್ಥಿತಿಗತಿಯಲ್ಲಿ ಸುಧಾರಣೆಯಾದರೂ, ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರ ಕಡೆಗಣನೆ ಮುಂದುವರಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಹಿಳೆಯರು ಸಮಾಜಮುಖಿಯಾಗಿ ಬೆಳೆಯಬೇಕು. ಸಮಾಜದಲ್ಲಿ ಗುರುತಿಸಿಕೊಳ್ಳಲು ಹೆಚ್ಚಿನ ಪರಿಶ್ರಮ ಪಡಬೇಕು. ಜ್ಞಾನ ಸಂಪಾದನೆ ಜತೆಗೆ ಸ್ವಾವಲಂಬಿಗಳಾಗಲು ಪ್ರಯತ್ನಿಸಬೇಕು. ಮಹಿಳೆಯರ ಏಳಿಗೆಗೆ ಪುರುಷರು ಸಹಕರಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೇಂದ್ರದ ನಿರ್ದೇಶಕ ಪ್ರೊ. ಆರ್.ವಿ. ಗಂಗಶೆಟ್ಟಿ ಮಾತನಾಡಿ, ಮಹಿಳೆಯರನ್ನು ಪುರುಷರಿಗೆ ಸರಿ ಸಮನಾಗಿ ಕಾಣಬೇಕು. ಲಿಂಗ ಭೇದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಮಹಿಳಾ ಶಿಕ್ಷಣದ ಸವಾಲುಗಳು ಮತ್ತು ಪರಿಹಾರಗಳು ಕುರಿತ ಭಾಷಣ, ಮೆಹಂದಿ ಹಾಗೂ ರಂಗೋಲಿ ಸ್ಪರ್ಧೆಗಳು ನಡೆದವು.

ಮಂದಕನಳ್ಳಿಯ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ. ಚಂದ್ರಕಾಂತ ಗಂಗಶೆಟ್ಟಿ, ಚಂದ್ರಪ್ಪ ಗೌರಶೆಟ್ಟಿ ಪದವಿಪೂರ್ವ ಕಾಲೇಜು ಉಪನ್ಯಾಸಕ ಸೂರ್ಯಕಾಂತ ಐನಾಪುರೆ, ಸದ್ಗುರು ಸಿದ್ಧಾರೂಢ ಮಹಿಳಾ ಪದವಿ ಕಾಲೇಜು ಪ್ರಾಚಾರ್ಯ ನಾಗಪ್ಪ ಜಾನಕನೋರ, ಡಾ. ಪಂಡಿತ, ಡಾ. ಸಂಗಪ್ಪ ತೌಡಿ, ಡಾ. ನಾಗೇಂದ್ರಪ್ಪ ಮೈಲಾರಿ, ಈಶ್ವರ ರೆಡ್ಡಿ, ಅರ್ಚನಾ ಎಚ್, ರೇಣುಕಾ, ಪ್ರಿಯಾಂಕಾ, ರವಿ, ಪ್ರೇಮಲತಾ ಇದ್ದರು. ಶ್ರೀಲತಾ ನಿರೂಪಿಸಿದರು. ಡಾ. ಅನ್ನಪೂರ್ಣ ವಂದಿಸಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರ ಹಾಗೂ ವಿಶ್ವವಿದ್ಯಾಲಯದ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರದ ವತಿಯಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು.

## ಬೀದರ್ ತಾಲ್ಲೂಕು ಕಸಾಪ ಪದಾಧಿಕಾರಿಗಳ ನೇಮಕ







ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 05 : ಕನ್ನಡ ಸಾಹಿತ್ಯ ಪರಿಷತ್ತಿನ ಬೀದರ್ ತಾಲ್ಲೂಕು ಘಟಕದ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಟಿ.ಎಂ. ಮಚ್ಚೆ ತಿಳಿಸಿದ್ದಾರೆ.

ಪದಾಧಿಕಾರಿಗಳ ಹೆಸರು ಹೀಗಿವೆ. ಗುರುನಾಥ ಅಕ್ಕಣ್ಣ (ಗೌರವಾಧ್ಯಕ್ಷ), ಕಲ್ಯಾಣರಾವ್ ಚಳಕಾಪುರೆ, ಜಗನ್ನಾಥ ಕಮಲಾಪುರೆ, ಅಶೋಕ ದಿಡಗೆ (ಉಪಾಧ್ಯಕ್ಷ), ಉಮೇಶ ಜಾಬಾ, ವೀರಶೆಟ್ಟಿ ಚನಶೆಟ್ಟಿ (ಗೌರವ ಕಾರ್ಯದರ್ಶಿ), ದೇವೇಂದ್ರ ಕರಂಜೆ (ಕೋಶಾಧ್ಯಕ್ಷ) ಮತ್ತು ಯೋಗೇಂದ್ರ ಯದಲಾಪುರೆ (ಸಂಘಟನಾ ಕಾರ್ಯದರ್ಶಿ).

## ಮಾ.೮-೯ರಂದು ಶಂಕರಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.5–ನಗರದ ವಿನಾಯಕನಗರದಲ್ಲಿ ಶೃಂಗೇರಿ ಶಾರದಾ ಪೀಠದ ನೂತನ ಮಠ ನಿರ್ಮಿಸಲಾಗಿದ್ದು, ಶ್ರೀಮಠದಲ್ಲಿ ಮಾ.8 ಹಾಗೂ 9 ರಂದು ವಿವಿಧಮೂರ್ತಿಗಳ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯಲಿದೆ ಎಂದು ಶಂಕರಮಠದ ವ್ಯವಸ್ಥಾಪಕ ಶಿವರಾಮ ಹೆಗಡೆ ಹೇಳಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಶೃಂಗೇರಿ ಶಾರದಾ ಪೀಠದ ಜಗದ್ಗುರು ವಿಧುಶೇಖರಭಾರತೀಸ್ವಾಮೀಜಿ ಮಾ.8 ರಂದು ಶನಿವಾರ ಕೊಪ್ಪಳದಿಂದ ಬಾಗಲಕೋಟೆ ಪುರ ಪ್ರವೇಶ ಮಾಡಲಿದ್ದಾರೆ. ಅವರಿಗೆ ಪೂರ್ಣಕುಂಭ ಸ್ವಾಗತ ನಡೆಯಲಿದ್ದು, ಶೋಭಾಯಾತ್ರೆ ಜರುಗಲಿದೆ.

ರೋಟರಿವೃತ್ತದಿಂದ ಶೋಭಾ ಯಾತ್ರೆ ಹೊರಟು ಕಟ್ಟಿ ಆಸ್ಪತ್ರೆ, ವಿನಾಯಕ ನಗರದ ಮೂಲಕ ಶಂಕರಮಠಕ್ಕೆ ತಲುಪಲಿದೆ. ನಂತರ ಶ್ರೀಗಳಿಗೆ ಧೂಳಿ ಪಾದಪೂಜೆ, ಫಲಸಮರ್ಪಣೆ, ಶ್ರೀಗಳಿಂದ ಆಶೀರ್ವಚನ, ರಾತ್ರಿ 8–30 ಗಂಟೆಗೆ ಶ್ರೀಗಳಿಂದ ಚಂದ್ರಮೌಳೀಶ್ವರ ಪೂಜೆ ಹಾಗೂ ಪ್ರಸಾದ ವಿತರಣೆ, ಸಭಾಕಾರ್ಯಕ್ರಮ ನಡೆಯಲಿದೆ.

ಮಾ.9 ರಂದು ಬೆಳಿಗ್ಗೆ 8 ಗಂಟೆಗೆ ಅರ್ಚಕರಿಂದ ಮೌಳೀಶ್ವರ ಪೂಜೆ, 10 ಗಂಟೆಯಿಂದ ಶ್ರೀಗಳ ಅಮೃತ ಹಸ್ತದಿಂದ ಶಕ್ತಿಗಣಪತಿ, ಶಾರದಾಂಬಾ, ಚಂದ್ರಮೌಳೀಶ್ವರ ಹಾಗೂ ಶಂಕರ ಭಗವತ್ಪಾದರ ಮೂರ್ತಿಗಳ ಕುಂಬಾಭಿಷೇಕ ಮಹೋತ್ಸವ, ಶ್ರೀಗಳ ದರ್ಶನ, ಭಕ್ತರಿಂದ ಪಾದಪೂಜೆ, ಭಿಕ್ಷಾವಂದನೆ ನಡೆಯಲಿದ್ದು, ಮಧ್ಯಾಹ್ನ ತೀರ್ಥ ಪ್ರಸಾದ ವಿತರಣೆ ಆಗಲಿದೆ ಎಂದರು.

ವಿಧುಶೇಖರ ಭಾರತೀ ಶ್ರೀಗಳು ವಿಜಯಯಾತ್ರೆ ಕೈಗೊಂಡಿದ್ದು, ಮಾ.7 ರಂದು ಜಿಲ್ಲೆಯ ಬದಾಮಿ–ಬನಶಂಕರಿಗೆ ಆಗಮಿಸಿ ಬನಶಂಕರಿ ದೇವಿಗೆ ಪೂಜೆ ಸಲ್ಲಿಸಿ ವಾಸ್ತವ್ಯ ಮಾಡುವರು. ಮಾ.8 ಬೆಳಿಗೆ ಕೊಪ್ಪಳಕ್ಕೆ ತೆರಳಿ, ಸಂಜೆ ಬಾಗಲಕೋಟೆಗೆ ಆಗಮಿಸುವರು.

ಮಾ.9 ಶಂಕರಮಠದಲ್ಲಿ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಜಮಖಂಡಿಗೆ ತೆರಳಿ ವಾಸ್ತವ್ಯ ಮಾಡುವರು. ಮಾ.10 ಜಮಖಂಡಿಯಲ್ಲಿ ನೂತನ ಶಂಕರಮಠ ಉದ್ಘಾಟಿಸುವರು. ಸಂಜೆ ಮುಧೋಳದಲ್ಲಿ ವಿಜಯಯಾತ್ರೆ ಕೈಗೊಳ್ಳಲಿದ್ದಾರೆ. ಮಾ.11 ಮುಧೋಳದಲ್ಲಿ ಪೂಜಾ ಕೈಂಕರ್ಯ ನಡೆಸಿ ಸಂಜೆ ಕಲಬುರ್ಗಿ ಜಿಲ್ಲೆಯ ಗಾಣಗಾಪೂರ ದತ್ತಪೀಠಕ್ಕೆ ತೆರಳುವರು ಎಂದು ಶಿವರಾಮ ಹೆಗಡೆ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಗಿರೀಶ ಮಾಸೂರಕರ, ವಾಮನರಾವ ಕವಟೇಕರ, ಕಿರಣ ಬಾಗಲಕೋಟೆ, ಡಾ.ರಾಜೇಂದ್ರ ಜೋಶಿ, ಎಸ್.ಕೆ.ಕುಲಕರ್ಣಿ ಇದ್ದರು.

## ಮಕ್ಕಳಿಗೆ ವಿದ್ಯೆಯ ಜೊತೆ ಮೌಲ್ಯಗಳನ್ನು ಕಲಿಸಬೇಕಿದೆ:ಬದನೂರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.5– ವಿದ್ಯೆಯ ಜೊತೆ ಮಕ್ಕಳಿಗೆ ಮಾನವೀಯ ಮೌಲ್ಯಗಳನ್ನು ಕಲಿಸುವ ಶಿಕ್ಷಣದ ಅಗತ್ಯತೆಯಿದೆ ಎಂದು ಶಿಕ್ಷಕ ಎಸ್.ಆರ್.ಬದನೂರ ಹೇಳಿದರು. ಸಮೀಪದ ಮಲ್ಲಾಪೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ನಡೆದ ಗುರುವಂದನಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಜೀವನದಲ್ಲಿ ಯಶಸ್ಸುಗಳಿಸಲು ಗುರುವಿನ ಮಾರ್ಗದರ್ಶನದ ಅಗತ್ಯವಿದೆ ಎಂದರು. ಮಾಹಿತಿಯುಳ್ಳ ಜ್ಞಾನಕ್ಕಿಂತ ಅನುಭಾವತೆಯುಳ್ಳ ಜ್ಞಾನ ಮಿಗಿಲಾದುದು. ಗುರು ಶಿಷ್ಯರ ಸಂಬಂಧ ಪವಿತ್ರವಾಗಿದ್ದು ಶಿಕ್ಷಕರು ಮಕ್ಕಳ ಶ್ರೇಯಸ್ಸನ್ನು ಬಯಸಿ ಮಾರ್ಗದರ್ಶನ ಮಾಡಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಾಲೆಯ ಮುಖ್ಯಗುರು ವಾಯ್.ಡಿ.ಕಿರಸೂರ, ಮಕ್ಕಳು ಕಲಿಕೆಯ ಜೊತೆಗೆ ಸಂಸ್ಕಾರವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ. ಕಲಿಸಿದ ಗುರುಗಳನ್ನು ನೆನೆಪಿಸಿಕೊಂಡು ಅವರಿಗೆ ಗೌರವ ಸಮರ್ಪಿಸಿ ವಂದಿಸುವ ಕಾರ್ಯ ಶ್ಲಾಘನೀಯವಾದುದು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಪಂ ಮಾಜಿ ಸದಸ್ಯ ನಿಂಗಣ್ಣ ಲಾಗಲೋಟಿ, ಗುರುವಂದನಾ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿ–ಶಿಕ್ಷಕರ ಬಾಂಧವ್ಯ ಗಟ್ಟಿಗೊಳ್ಳುತ್ತದೆ ಎಂದರು. ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಜಕ್ಕಪ್ಪ ಪರಾಂಡೆ, ಬಿ.ಆರ್.ಮಿಟ್ಟಲಕೋಡ, ಲೋಕೇಶ್ವರಿ ಪರಡ್ಡಿ, ಎಸ್.ಆರ್.ಬದನೂರ, ಕಾಶೀಬಾಯಿ ಅರಕೇರಿ, ಎಸ್.ಎಂ.ಗುಳೇದಗುಡ್ಡ, ಹನಮಂತಪೂಜಾರಿ ಅವರನ್ನು ಹಳೇ ವಿದ್ಯಾರ್ಥಿಗಳು ಸನ್ಮಾನಿಸಿ ಗುರುವಂದನೆ ಸಲ್ಲಿಸಿದರು.

ಗ್ರಾಮದ ಪ್ರಮುಖ ಬಸಪ್ಪ ಕಂದಗಲ್ಲ, ಎಚ್.ಎಲ್.ಲಮಾಣಿ, ಎಸ್.ಕೆ.ಅಂಬೇಕರ, ಎನ್.ಎಂ.ಹಾವರಗಿ ಹಾಗೂ ಶಿಕ್ಷಕರು ವೇದಿಕೆಯಲ್ಲಿದ್ದರು. ನಾಗೇಶ ಬೆಣ್ಣೂರ ನಿರೂಪಿಸಿದರು. ಗೀತಾ ರಾಜನಾಳ ವಂದಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.

# ತಂಬಾಕು ಸೇವನೆಯನ್ನು ನಿಯಂತ್ರಿಸಿ ಆರೋಗ್ಯ ಕಾಪಾಡಿಕೊಳ್ಳಬೇಕು:ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ

ಮಲ್ಲಮ್ಮ ನುಡಿ ವಾರ್ತೆ



ಕಲಬುರಗಿ:ಮಾ.05–ತಂಬಾಕು ಸೇವನೆಯನ್ನು ನಿಯಂತ್ರಿಸಿ ವ್ಯಕ್ತಿಯು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಜತೆಗೆ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅವರು ಹೇಳಿದರು.

ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಸಭೆಯಲ್ಲಿ ತಂಬಾಕು ಸೇವನೆಯನ್ನು ಮಾಡಿ ಸಾರ್ವಜನಿಕ ಸ್ಥಳಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ಉಗುಳಿದರೆ ಅಲ್ಲಿನ ಸ್ವಚ್ಚತೆಯನ್ನು ಅಲ್ಲಿನ ಜನರು ಕಾಪಾಡುವವರಾರು. ಪ್ರತಿಯೊಬ್ಬ ಸಾರ್ವಜನಿಕರು ಸ್ವಚ್ಚತೆಗೆ ಆದ್ಯತೆಯನ್ನು ನೀಡಿ ತಮ್ಮ ಆರೋಗ್ಯವನು ಕಾಪಾಡಿಕೊಳ್ಳಬೇಕು ಎಂದು ಮಾತನಾಡಿದರು.

ಕೋಟ್ಪಾ ಕಾಯ್ದೆಯಡಿಲ್ಲಿ ದಾಖಲಾದ ಏಪ್ರಿಲ್ ರಿಂದ ಮಾರ್ಚ 2025 ರವರೆಗೆ ಸೆಕ್ಸನ್ 4ನೇ ಪ್ರಕಾರ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಹಾಗೂ ಪೋಲಿಸ್ ಇಲಾಖೆ ಜಂಟಿ ಕಾರ್ಯಚರಣೆಯಿಂದ 1011 ಪ್ರಕರಣಗಳು, 1,21,225 ಲಕ್ಷ ರೂ ದಂಡವಸೂಲಿಯಾಗಿದೆ.

ಸೆಕ್ಸನ್ 6ಎ & ಸೆಕ್ಸನ್ 6ಬಿ ಪ್ರಕಾರ ಒಟ್ಟು 571 ಪ್ರಕರಣಗಳು ರೂ.57.500 ದಂಡವಸೂಲಿಯಾಗಿದೆ ಎಂದು ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆ ಗಾರರಾದ ಸುಜಾತ ಪಾಟೀಲ ಸಭೆಯಲ್ಲಿ ತಿಳಿಸಿದ್ದರು.

ಮುಂಬರುವ ವಿಶ್ವ ತಂಬಾಕು ದಿನದಂದು 40 ಗ್ರಾಮಗಳನ್ನು ತಂಬಾಕುಮುಕ್ತ ಗ್ರಾಮಗಳೆಂದು ಘೋಷಣೆಯನ್ನು ಮಾಡಬೇಕು. ಹಿಂದೆ 20 ಗ್ರಾಮಗಳನ್ನು ತಂಬಾಕು ಮುಕ್ತ ಗ್ರಾಮಗಳೆಂದು ಘೋಷಣೆಯನ್ನು ಮಾಡಿದ ವರದಿಯನ್ನು ಒಂದು ತಿಂಗಳಲ್ಲಿ ಸಲ್ಲಿಸಬೇಕು.

ಶಾಲಾ ಕಾಲೇಜುಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು ಶಾಲೆಯಿಂದ 100 ಮೀಟರ ಅಂತರದ ಧೂಮಪಾನ ಮತ್ತು ತಂಬಾಕು ಮಾರಾಟ ಮಾಡಲು ಅವಕಾಶ ನೀಡಬಾರದೆಂದು ಯಾವುದೇ ಅಂಗಡಿಗಳನ್ನು ಇರಕೂಡದು ಎಂದು ಸೂಚನೆ ನೀಡಿದರು.

ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ ಪಟ್ಟಣ ಪಂಚಾಯತ ಅಡಿಯಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಟೋಬ್ಯಾಕೋ ವೆಂಡರ್ ಲೈಸೆನ್ಸ್‌ಗಳನ್ನು ವಿತರಿಸಿರುವ ಮಾಹಿತಿ ಪಡೆಯಬೇಕೆಂದರು

ಕಲಬುರಗಿ ಜಿಲ್ಲೆಯ ಎಲ್ಲಾ ಖಾಸಗಿ ಶೈಕ್ಷಣಿಕ ಸಂಸ್ಥೆಗಳನ್ನು,ಶಾಲೆ,ಕಾಲೇಜುಗಳನ್ನು ತಂಬಾಕು ಶಾಲೆಗಳನ್ನು ಮಾಡಿ ಶಾಲೆಗಳ ToFEI(ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆ) ನಿಯಮಾನೂಸಾರ ನಾಮಫಲಕಗಳನ್ನು ಅಳವಡಿಸಿ ತಂಬಾಕು ಮುಕ್ತ ಶಾಲೆ ಎಂದು ಗುರುತಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡಿದರು.

160 ಶಾಲಾ ಮತ್ತು ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ, ಜಿಲ್ಲಾ ಮತ್ತು ತಾಲೂಕುಗಳಲ್ಲಿ 46 ಕೋಟ್ಪಾ ದಾಳಿಗಳು,122 ಶಾಲಾಗಳಲ್ಲಿ ಜಿಲ್ಲಾದಾದ್ಯಂತ ಒಂದೇ ದಿನ ಪ್ರಮಾಣ ವಚನ ಜಾಥಾ ಕಾರ್ಯಕ್ರಮ ಶಾಲೆ ಮತ್ತು ಕಾಲೇಜುಗಳಲ್ಲಿ ರಂಗೋಲಿ ಸ್ಪರ್ಧೆ,ವಿಶ್ವ ತಂಬಾಕು ರಹಿತ ದಿನಾಚರಣೆಯ ಅಂಗವಾಗಿ ವಿವಿಧ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು, ಎಂದು ಸುಜಾತ ಪಟೇಲ್ ಸಭೆಗೆ ತಿಳಿಸಿದರು.

ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ವಿದ್ಯಾರ್ಥಿಗಳಿಂದ ರಂಗೋಲಿ, ಚಿತ್ರಕಲೆ, ಸ್ಪರ್ದೆಯಲ್ಲಿ ವಿಜೇತ ಪ್ರಶಸ್ತಿ ಪತ್ರಗಳನ್ನು ಪಡೆದುಕೊಂಡರು

ಸಭೆಯಲ್ಲಿ ಡಿ.ಎಚ್.ಓ ಶರಣಬಸಪ್ಪ ಕ್ಯಾತನಾಳ, ಜಿಲ್ಲಾ ಸಮೀಕ್ಷಣಾ ಅಧಿಕಾರಿ, ಡಾ. ರಾಕೇಶ ಕಾಂಬಳೆ, ಆರೋಗ್ಯ ಇಲಾಖೆಯ ಜಿಲ್ಲಾ ಆರೋಗ್ಯ ಇಲಾಖೆ ರೋಗಶಾಸ್ತ್ರ ಡಾ. ಚಂದ್ರ ಮೌಳೇಶ್ವರ, ಜಿಲ್ಲಾ ಪಂಚಾಯತ್ ಉಪಾಕಾರ್ಯದರ್ಶಿ ಲಕ್ಷಣ ಶೃಂಗೇರಿ, ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ವನೌಷಧಿ ಸಸ್ಯಗಳ ಸಂರಕ್ಷಣೆ ಜಾಗೃತಿಗಾಗಿ ಶೈಲೇಂದ್ರ ಕಾವಡಿ ಅವರಿಗೆ ವನೌಷಧಿ ಪಂಡಿತ ಪ್ರಶಸ್ತಿ ಪ್ರಧಾನ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ::ಬೀದರ್ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಬೆಂಗಳೂರು ಕರ್ನಾಟಕ ಮಾಲಿನ್ಯನಿಯಂತ್ರಣ ಮಂಡಳಿ ಕರ್ನಾಟಕ ರಾಜ್ಯ ಪಾರಂಪರಿಕ ವೈದ್ಯ ಪರಿಷತ್ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿದ 15ನೇ ರಾಜ್ಯಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನ ಬೀದರದಲ್ಲಿ ಎರಡು ಮೂರು ಮತ್ತು ನಾಲ್ಕನೇ ಮಾರ್ಚ್ ರಂದು ಸಡಗರದಿಂದ ಜರುಗಿತು, ಮಾರ್ಚ್ 4 ರಂದು ನಡೆದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ 5 ಜನರಿಗೆ ವೈದ್ಯ ರತ್ನ ಪ್ರಶಸ್ತಿಯನ್ನು ನೀಡಲಾಯಿತ್ತು. ಇದೇ ಸಂದರ್ಭದಲ್ಲಿ ವನೌಷಾಧಿ ಪಂಡಿತ ಪ್ರಶಸ್ತಿಯನ್ನು ಖ್ಯಾತ ಪರಿಸರವಾದಿ ಸಮಾಜ ಕಾರ್ಯಕರ್ತ ಹಾಗೂ ಹಿರಿಯ ಪತ್ರಕರ್ತ ಶೈಲೇಂದ್ರ ಕಾವಡಿ ಹುಮನಾಬಾದ ಇವರಿಗೆ ಈ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಕಳೆದ 26 ವರ್ಷಗಳಿಂದ ಜಿಲ್ಲೆಗಳಲ್ಲಿ ಔಷಧಿ ಸಸ್ಯಗಳ ಸಂರಕ್ಷಣೆ ಹಾಗೂ, ಅಭಿವೃದ್ಧಿಗಾಗಿ ಹಗಲಿರಳು ಶ್ರಮಿಸುತ್ತಿರುವ ಇವರಿಗೆ ಈ ಸಮ್ಮೇಳನದಲ್ಲಿ 2025ರ ವನೌಷಾಧಿ ಪಂಡಿತ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತ್ತು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪಶು ವೈದ್ಯಕೀಯ, ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯದ ಕುಲಪತಿಗಳಾದ ಕೆ ಸಿ ವೀರಣ್ಣ, ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋವರ್ಧನ್ ಸಿಂಗ್, ಪಾರಂಪರಿಕ ವೈದ್ಯ ಪರಿಷತ್ತಿನ ಅಧ್ಯಕ್ಷರಾದ ಜಿ. ಮಹಾದೇವಯ್ಯಾ,ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ,ಎ. ಬಿ ಪಾಟೀಲ್,ಶ್ರೀಕಂತಯ್ಯಾ, ಭಾತಂಬ್ರಾ ಹಿರೇಮಠದ ಉತ್ತರಾಧಿಕಾರಿ ಡಾ.ಗುರುಬಸವ ದೇವರು, ಪ್ರೊ. ಜಗನ್ನಾಥ ಹೆಬ್ಬಾಳೆ ಸೇರಿದಂತೆ ಹಲವಾರು ಗಣ್ಯರು,ಅಧಿಕಾರಿಗಳು,ನಾಟಿ ವೈದ್ಯರು ಉಪಸ್ಥಿತರಿದ್ದರು. ಪರಿಸರವಾದಿ ಶೈಲೇಂದ್ರಕಾವಡಿ ಅವರ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಿದಕ್ಕೆ ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಚಿಟಗುಪ್ಪ, ಗ್ರಾಮ ಪಂಚಾಯತ್ ಸದಸ್ಯ ಸಂತೋಷಕುಮಾರ್ ನಾಗವಾರ್, ಹನಮಂತ ಹಳ್ಳಿ ಮುಸ್ತರಿ, ಬಸಯ್ಯಾ ಸ್ವಾಮಿ ಡಿಗ್ರಿ, ಪತ್ರಕರ್ತ ರಾಜಕುಮಾರ ಆರ್. ಹಡಪದ ಚಿಟಗುಪ್ಪ,ಗುರುನಾಥ ಕಲ್ಲೂರ್, ಕರಬಸಪ್ಪಯ್ಯಾ ಸ್ವಾಮಿ ಸಿಂದಬಂದಗಿ, ರುದ್ರಯ್ಯಾ ಸ್ವಾಮಿ ಕಂಗಟಿ ಬೀದರ್,ಶಾಂತವೀರ ಸ್ವಾಮಿ, ಬೋತಗಿ "ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.



"ಕಳೆದ 26 ವರ್ಷಗಳಿಂದ ಜಿಲ್ಲೆಗಳಲ್ಲಿ ವನೌಷಧಿ ಸಸ್ಯಗಳ ಸಂರಕ್ಷಣೆ, ಗಿಡ ಮರಗಳು ಉಳಿಸಿ ಬೆಳೆಸುವುದರ ಮೂಲಕ ಜನ ಜಾಗೃತಿ ಹಾಗೂ ಅಭಿವೃದ್ಧಿಗಾಗಿ ಹಗಲಿರಳು ಶ್ರಮಿಸುತ್ತಿರುವ ಹಿರಿಯ ಪತ್ರಕರ್ತ ಶೈಲೇಂದ್ರ ಕಾವಡಿ ಅವರಿಗೆ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಬೆಂಗಳೂರು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಕರ್ನಾಟಕ ರಾಜ್ಯ ಪಾರಂಪರಿಕ ವೈದ್ಯ ಪರಿಷತ್ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಬೀದರನಲ್ಲಿ ಜರುಗಿದ 15ನೇ ರಾಜ್ಯಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನ ಕಾರ್ಯಕ್ರಮದಲ್ಲಿ ವೈದ್ಯ ರತ್ನ ಪ್ರಶಸ್ತಿಯನ್ನು ದೂರತಿದ್ದಕ್ಕೆ ತುಂಬು ಹೃದಯದ ಅಭಿನಂದನೆಗಳು

– ಪತ್ರಕರ್ತ ರಾಜಕುಮಾರ ಆರ್. ಹಡಪದ ಚಿಟಗುಪ್ಪ"

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ





ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ನಗರದ ಎಸ್.ಎಸ್.ಕೆ ಬಸವೇಶ್ವರ ಕಲಾ, ವಿಜ್ಞಾನ,ವಾಣಿಜ್ಯ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಮಹಾ ವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಿಸಲಾಯಿತು. ಡಾ. ರಮೇಶ್ ಕೆ ಬಿ. ವಿಜ್ಞಾನದ ಪ್ರತಿಜ್ಞಾ ವಿಧಿ ಬೋಧಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಖ್ಯ ಅತಿಥಿಯಾಗಿ ನಿವೃತ್ತ ಪ್ರಧ್ಯಾಪಕರಾದ ಪ್ರೊ. ಆರ್ ಡಿ ಬಾಲಕಿಲೆ ಮಾತನಾಡಿ ಸಿ ವಿ ರಾಮನ್ ಅವರು ತಮ್ಮ ಪ್ರಸಿದ್ಧ "ರಾಮನ್ ಪರಿಣಾಮದ" ಸಿದ್ಧಾಂತ ಪ್ರಚುರಪಡಿಸಿದ ಮಹಾ ನಾಯಕ ಅದಕ್ಕೆ ನೊಬೆಲ್ ಪ್ರಶಸ್ತಿ ಸಿಕ್ಕಿರುವುದು ಹೆಮ್ಮೆಯ ವಿಷಯ. ಭೌತಶಾಸ್ತ್ರದಲ್ಲಿ ನೋಬೆಲ್ ಪುರಸ್ಕಾರ ಪಡೆದ ಮೊದಲ ಏಷ್ಯಾದ ವ್ಯಕ್ತಿ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ ಐ ಕ್ಯೂ ಎಸಿ ಸಂಯೋಜಕರಾದ ಡಾ ಶಿವಕುಮಾರ್ ಪಾಟೀಲ್ ಮಾತನಾಡಿ ಈ ಯುಗದಲ್ಲಿ ವಿಜ್ಞಾನ ಎಲ್ಲರಿಗೂ ಅವಶ್ಯಕತೆ, ವಿಜ್ಞಾನದ ಪ್ರಗತಿಯಿಂದ ದೇಶದ ಹಾಗೂ ವಿಶ್ವದ ಪ್ರಗತಿ ಸಾಧಿಸಲು ಸಾಧ್ಯ ಎಂದು ತಿಳಿಸಿದರು. ಉಪನ್ಯಾಸಕರಾದ ಮಹದೇವ್ ಡಿ. ಸ್ವಾಗತಿಸಿ ನಿರೂಪಿಸಿದರೆ. ಡಾ. ಸುರೇಶ್ ಎಚ್ ಆರ್ ವಂದಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಇಂದ್ರಜಿತ್ ರೆಡ್ಡಿ, ಸತೀಶ್ ರಾಠೊಡ. ಜ್ಯೋತಿ ಪಾಟೀಲ್, ವಾಣಿಶ್ರೀ. ಕು. ಆರುತಿ, ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಮತ್ತು ಎಲ್ಲಾ ವಿಭಾಗ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಉಪನ್ಯಾಸಕರಾದ ಮಹದೇವ ಡಿ. ಸ್ವಾಗತಿಸಿ ನಿರೂಪಿಸಿದರು. ಡಾ. ಸುರೇಶ ಎಚ್ ಆರ್.ವಂದಿಸಿದರು.

# ಮಂಗಳೂರು: ನಿಷೇಧಿತ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆಟೋರಿಕ್ಷಾ ಚಾಲಕನ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಮಂಗಳೂರು:ನಿಷೇಧಿತ ಎಂಡಿ–ಎಂಎ ಮಾದಕ ದ್ರವ್ಯ ಸಾಗಾಟ ಮತ್ತು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಆಟೋರಿಕ್ಷಾ ಚಾಲಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ಆರೋಪಿಯಿಂದ ಸುಮಾರು 3.75 ಲಕ್ಷ ರೂಪಾಯಿ ಮೌಲ್ಯದ 75 ಗ್ರಾಂ ಎಂಡಿ–ಎಂಎ,ಮೊಬೈಲ್ ಫೋನ್ ಮತ್ತು ಆಟೋರಿಕ್ಷಾವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ವಶಪಡಿಸಿಕೊಂಡ ವಸ್ತುಗಳ ಒಟ್ಟು ಮೌಲ್ಯ 5 ಲಕ್ಷ ರೂಪಾಯಿ ಎಂದು ಅಂದಾಜಿಸಲಾಗಿದೆ.

ಮಂಗಳೂರಿನ ಕಸಬಾ ಬೆಂಗ್ರೆ ನಿವಾಸಿ ಮೊಹಮ್ಮದ್ ಅಬ್ದುಲ್ ಜಲೀಲ್ (32) ಎಂಬಾತ ಬೆಂಗಳೂರಿನಿಂದ ಪಾರ್ಸೆಲ್ ಸರ್ವಿಸ್ ಮೂಲಕ ಎಂಡಿಎಂಎ ತರಿಸಿಕೊಂಡು ಮಂಗಳೂರಿನಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು ಮಾರ್ಚ್ 4 ರಂದು ಮಂಗಳೂರು ಉತ್ತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆತನನ್ನು ಬಂಧಿಸಿದ್ದರು. ಆರೋಪಿಯು ದೊಡ್ಡ ಮಾದಕವಸ್ತು ವಿತರಣಾ ಜಾಲದ ಭಾಗವಾಗಿರುವ ಶಂಕೆ ವ್ಯಕ್ತವಾಗಿದ್ದು, ಪೊಲೀಸರು ತನಿಖೆಯನ್ನು ಮುಂದುವರೆಸಿದ್ದಾರೆ.




ಬಸವಕಲ್ಯಾಣ :– ತಾಲೂಕಿನ ರಾಜೋಳ ಗ್ರಾಮದ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಪರಿಸರ ಸಂರಕ್ಷಣೆ ಹಾಗೂ ಜಾಗೃತಿ ಕಾರ್ಯಕ್ರಮ ಜರುಗಿತು ಕಾರ್ಯಕ್ರಮದ ಅಧ್ಯಕ್ಷತೆ ಬಾಲಾಜಿ ಪಾಟೀಲ್ ಮುಖ್ಯ ಗುರುಗಳು. ಮುಖ್ಯ ಅತಿಥಿ ಡ್ರಾಟಟ ಶಿವರಾಜ ಪಾಟೀಲ್ ಮಕ್ಕಳ ತಜ್ಞರು. ಅತಿಥಿಗಳಾಗಿ ಜಗನಾಥ್ ಚಾಂದೇ ಮುಖ್ಯ ಗುರುಗಳು, ಶಿಕ್ಷಕರು ಶರಣಬಸಪ್ಪ, ಪವರ ಉಜ್ವಲಾ, ವಾಣಿ ಕೆ. ಮತ್ತು ದಾವೂದ್ ಕೃಷ್ಣಾರೆಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ವಿಧಾನಸಭೆ ಕಲಾಪದ ನೇರಪ್ರಸಾರದಲ್ಲಿ ವಿಪಕ್ಷಗಳ ಭಾಷಣಕ್ಕೆ ಕತ್ತರಿ: ಅಧಿಕಾರಿ ಅಮಾನತು



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಸದನದ ಕಾರ್ಯಕಲಾಪಗಳ ನೇರಪ್ರಸಾರದಲ್ಲಿ ಪ್ರತಿಪಕ್ಷ ಸದಸ್ಯರ ಮಾತು ಪ್ರಸಾರವಾಗದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ರಾಜ್ಯ ಸರ್ಕಾರ ಅಮಾನತು ಮಾಡಿದೆ.

ವಿಧಾನಸಭೆ ಕಲಾಪದ ನೇರ ಪ್ರಸಾರದಲ್ಲಿ ವಿರೋಧ ಪಕ್ಷದ ಸದಸ್ಯರನ್ನು ತೋರಿಸದೇ, ಕೇವಲ ಆಡಳಿತ ಪಕ್ಷದವರನ್ನು ತೋರಿಸಲಾಗುತ್ತಿತ್ತು. ಇದ–ಕ್ಕೆ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಬಳಿಕ ಕಲಾಪವನ್ನು ಸುಮಾರು 10 ನಿಮಿಷಗಳ ಕಾಲ ಮುಂದೂಡಲಾಗಿತ್ತು. ಭೋಜನ ವಿರಾಮದ ಬಳಿಕವೂ ಪ್ರತಿಪಕ್ಷ ನಾಯಕರ ಭಾಷಣ ಪ್ರಸಾರವಾಗಿರಲಿಲ್ಲ.

ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಈ ಬಗ್ಗೆ ತನಿಖೆ ಕೈಗೊಂಡು ಸಂಬಂಧಪಟ್ಟ ಮುಖ್ಯಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದ್ದರು.

ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಅವರು, ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತುಗೊಳಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು.

ಇದಕ್ಕೆ ಬಿಜೆಪಿ ಸದಸ್ಯರು ಕಿರಿಯ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳದೆ ಹಿರಿಯ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಇದಾದ ಕೆಲವು ನಿಮಿಷಗಳ ಬಳಿಕ ಸಮಸ್ಯೆ ಬಗೆಹರಿಯಿತು.

# ಬೆಳಗಾವಿ: ಕುಡುಕ ಪತಿಯ ಕಾಟ; ಮೂವರು ಮಕ್ಕಳೊಂದಿಗೆ ಕೃಷ್ಣಾ ನದಿಗೆ ಹಾರಿ ಮಹಿಳೆ ಆತ್ಮಹತ್ಯೆ




ಮಲ್ಲಮ್ಮ ನುಡಿ ವಾರ್ತೆ

ಬೆಳಗಾವಿ: ಕುಡುಕ ಪತಿಯ ಕಾಟಕ್ಕೆ ಬೇಸತ್ತ ಮಹಿಳೆ ತನ್ನ ಮೂವರು ಮಕ್ಕಳೊಂದಿಗೆ ಕೃಷ್ಣಾ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಈ ವೇಳೆ ಓರ್ವ ಬಾಲಕಿಯನ್ನು ಸ್ಥಳೀಯರು ರಕ್ಷಿಸಿದ್ದರು. ಆದರೆ ತಾಯಿ ಹಾಗೂ ಇಬ್ಬರು ಮಕ್ಕಳು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದರು.

ಬೆಳಗಾವಿ ಜಿಲ್ಲೆಯ ರಾಯಬಾಗದಲ್ಲಿ ಈ ಘಟನೆ ನಡೆದಿತ್ತು. ತಾಯಿ ಶಾರದಾ ಹಾಗೂ ಇಬ್ಬರು ಮಕ್ಕಳಾದ ಅಮೃತಾ, ಆದರ್ಶ್ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದರು.

ಅನುಕ್ಷಾ ಡಾಳೆ ಎಂಬ ಓರ್ವ ಮಗಳನ್ನು ಸ್ಥಳೀಯರು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾದೇ ಅನುಕ್ಷಾ ಕೂಡ ಕೊನೆಯುಸಿರೆಳೆದಿದ್ದಾಳೆ.

ಶಾರದಾ ಪತಿ ಅಶೋಕ್ ಡಾಳೆ ಪ್ರತಿದಿನ ಕುಡಿದು ಬಂದು ಹಿಂಸಿಸುತ್ತಿದ್ದ. ಹೊಡೆಯುವುದು, ಕಿರುಕುಳ ನೀಡುತ್ತಿದ್ದ. ಇದ–ರಿಂದ ನೊಂದ ಶಾರದಾ ತನ್ನ ಮೂವರು ಮಕ್ಕಳೊಂದಿಗೆ ಕೃಷ್ಣಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಚಿಕ್ಕೋಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

# ಖೇಡ ಸಂಗಮದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ತಾಲೂಕಿನ ಡಾ. ಚನ್ನಬಸವ ಪಟ್ಟದ್ದೇವರು ಗುರುಕುಲ ಹಿರಿಯ ಪ್ರಾಥಮಿಕ ಶಾಲೆ, ಖೇಡ್ ಸಂಗಮದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ನಿಮಿತ್ತ ವಿಜ್ಞಾನ ವಸ್ತು ಪ್ರದರ್ಶನ ಜರುಗಿತು. ಶಾಲೆಯ ಮುಖ್ಯ ಗುರುಗಳಾದ ಸಂಜುಕುಮಾರ ಮೇಂಗಾ ಅಧ್ಯಕ್ಷತೆಯ ಸ್ಥಾನ ವಹಿಸಿಕೊಂಡು. ಪ್ರಾಸ್ತಾವಿಕವಾಗಿ ಅವರು ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತು ಮಾತಾಡಿದರು.

ದಿವ್ಯಸಾನಿಧ್ಯ ಡಾ.ಪೂಜ್ಯ ಮಹಾದೇವಮ್ಮ ತಾಯಿ ವಹಿಸಿ ಮಾತನಾಡಿದರು. ಡಿ.ದೇವರಾಜ ಅರಸ ಪ್ರೌಢಶಾಲೆಯ ಸಹ ಶಿಕ್ಷಕರಾದ ನ್ಯಾನೇಶ್ವರಗಾಯಕವಾಡ ಹಾಗೂ ಮುಖ್ಯಶಿಕ್ಷಕರಾದ ಮಾಡೆ ಸರ್ ವಹಿಸಿಕೊಂಡಿದ್ದರು. ಅತಿಥಿ, ಅಧ್ಯಕ್ಷ, ಶಿಕ್ಷಕ ಹಾಗೂ ವಿದ್ಯಾರ್ಥಿಗಳು ವಿಜ್ಞಾನ ಪ್ರತಿಜ್ಞಾ ವಿಧಿ ಮಾಡಿದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆ ಸಂಗೀತಾ ಮಾಡಿದರು. ಬಸವ ಚಿಂದೆ ವಂದನಾರ್ಪಣೆ ಮಾಡಿದರು.

## ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್: ಹೆಸರು ನೋಂದಾಯಿಸಿ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 05 : ಇಲ್ಲಿಯ ನೀಲಗಿರಿ ಇನ್‌ಸ್ಟಿಟ್ಯೂಟ್ ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಪದವಿಯಲ್ಲಿ ಅಧಿಕ ಅಂಕ ಗಳಿಸಿದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್, ಟ್ಯಾಬ್ ಹಾಗೂ ಪಠ್ಯಪುಸ್ತಕ ನೀಡಲು ನಿರ್ಧರಿಸಿದೆ.



ಅಂಜಲಿ ರೂರಲ್ ಡೆವಲಪಮೆಂಟ್ ಸೊಸೈಟಿ ಪ್ರಾಯೋಜಕತ್ವದ 'ಕಲಿಕಾ ಕಿರಣ' ಯೋಜನೆಯಡಿ ಆಯ್ದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಟ್ಯಾಬ್ ಹಾಗೂ ಪಠ್ಯಪುಸ್ತಕ ವಿತರಿಸಲಾಗುವುದು ಎಂದು ನೀಲಗಿರಿ ಇನ್‌ಸ್ಟಿಟ್ಯೂಟ್ ಮಾನವ ಸಂಪನ್ಮೂಲ ಅಧಿಕಾರಿ ಆಶಾರಾಣಿ ಸಾಗರ್ ತಿಳಿಸಿದ್ದಾರೆ.

2023–24 ಹಾಗೂ 2024–25ನೇ ಸಾಲಿನ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ, ಪದವಿಯ ಎರಡನೇ, ನಾಲ್ಕನೇ ಹಾಗೂ ಆರನೇ ಸೆಮಿಸ್ಟರ್‌ನಲ್ಲಿ ಶೇ 70ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹೆಸರು ನೋಂದಾಯಿಸಬಹುದು ಎಂದು ಹೇಳಿದ್ದಾರೆ.

ಅಂಕಗಳ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಸರು ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 7259000818 ಅಥವಾ 8867805519ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

## ಯುವಕರು ಮಾದಕ ವಸ್ತು ಸೇವನೆಯಿಂದ ದೂರವಿರುವ ಸಂಕಲ್ಪ ಮಾಡಬೇಕು: ತಹಶೀಲ್ದಾರ ಮಲಶೆಟ್ಟಿ ಚಿದ್ರಿ



ಮಲ್ಲಮ್ಮ ನುಡಿ ವಾರ್ತೆ

ಬೀದರ:ಮಾ.5: ಯುವ ಪೀಳಿಗೆ ದೂಮಪಾನ ಮದ್ಯಪಾನದಿಂದ ಅನೇಕ ಆರೋಗ್ಯ ಸಮಸ್ಯೆ ಎದುರಿಸುತ್ತಿದೆ. ಇಂದಿನ ಯುವಕರು ಕುಡಿತ, ಡ್ರಗ್ಸ್, ಗುಟಕಾ ಚಟಗಳಿಂದ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ.

ನಶೆಯಲ್ಲಿ ಅಪರಾದ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾ–ರೆ. ಪ್ರತಿಯೊಬ್ಬರು ಮಾದಕ ವಸ್ತು ಸೇವನೆಯಿಂದ ದೂರ ಉಳಿಯುವ ಸಂಕಲ್ಪ ಮಾಡಬೇಕು ಎಂದು ಔರಾದ ತಾಲ್ಲೂಕ ತಹಶೀಲ್ದಾರ ಮಲಶೇಟ್ಟಿ ಚಿದ್ರಿ ಹೇಳಿದರು.

ಅವರು ಮಂಗಳವಾರ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೀದರ ಹಾಗೂ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆ ಔರಾದ (ಬಾ) ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಮದ್ಯಪಾನ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ವಿಚಾರ ಸಂಕೀರಣ ಉದ್ಘಾಟಿಸಿ ಮಾತನಾಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರ ಮುದೋಳ (ಬಿ) ವೈದ್ಯಧಿಕಾರಿ ಡಾ. ಅನಿಕುಮಾರ ಗಡ್ಡೆ, ಅವರು ಅತಿಥಿ ಉಪನ್ಯಾಸ ನೀಡಿ ಮಾತನಾಡಿ, ತಂಬಾಕು, ಗುಟ್ಕಾ, ಮಧ್ಯ ಸೇವನೆಯಿಂದ ಕ್ಯಾನ್ಸರ್, ಪಾರ್ಶವಾಯುವಂತಹ ಮಾರಕ ರೋಗಗಳು ಬರುತ್ತವೆ. 16 ರಿಂದ 23 ವರ್ಷದ ಒಳಗಿನ ಯುವಕರು ಮೊದಲಿಗೆ ಮೋಜಿಗಾಗಿ ತಂಬಾಕು, ಗುಟ್ಕಾ, ಹಾಗೂ ಮಧ್ಯಸೇವನೆ ಪ್ರರಂಭಿಸುತ್ತಾರೆ. ನಂತರ ದಿನಗಳಲ್ಲಿ ಅದು ಹವ್ಯಾಸವಾಗಿ ಬೆಳೆದು ನಾನಾ ಸಮಸ್ಯೆಗಳಿಗೆ ಕಾರಣವಾಗುತ್ತದೆ. ದೇಶದಲ್ಲಿ ಪ್ರತಿ ದಿನ ಮದ್ಯಪಾನ ಹಾಗೂ ಕ್ಯಾನ್ಸರ್ ರೋಗ–ಕ್ಕೆ ತುತ್ತಾಗಿ 2500 ಜನ ಸಾವನ್ನಪ್ಪುತ್ತಿದ್ದಾರೆ. ರಾಜ್ಯದಲ್ಲಿ ಕೂಡ ಅನೇಕ ಯುವಜನತೆ ಮಾರಕ ರೋಗಗಳಿಂದ ಬಲಿಯಾಗುತ್ತಿದ್ದಾರೆ ಎಂದರು

ಔರಾದ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಾಲಾಜಿ ಅಮರವಾಡಿ ಮಾತನಾಡಿ, 15 ರಿಂದ 25 ವಯೋಮಾನದ ಇಂದಿನ ಯುವಕರು ಮದ್ಯಸೇವನೆ, ಗುಟ್ಕಾ ಮತ್ತಿತರ ನಶೆ ಏರಿಸುವ ವಸ್ತುಗಳಿಂದ ದೂರ ವಿರಬೇಕು. ಪ್ರತಿಯೊಂದು ಮಾದಕವಸ್ತುಗಳು ಮೇಲೆ ಆರೋಗ್ಯಕ್ಕೆ ಹಾನಿಕಾರಕ ಎಂದು ಬರೆದರು ಕೂಡ ಅದನ್ನು ಲೆಕ್ಕಿಸದೆ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಅನಕ್ಷರಸ್ತರಿಗಿಂತ ಅಕ್ಷರಸ್ಥರೆ ಎಲ್ಲಾ ತಿಳಿದು ಓದಿಕೊಂಡರು ಸಹ ಮಾದಕ ವ್ಯಸನಿಗಳಾಗುತ್ತಿದ್ದಾರೆ ಎಂದು ಕಳಕಳಿ ವ್ಯಕ್ತಪಡಿಸಿದರು.

ಜಿಲ್ಲಾ ವಾರ್ತಾಧಿಕಾರಿ ಮಂಜುನಾಥ ಸುಳ್ಳೊಳಿ ಅವರು ಮಾತನಾಡಿ, ಸರ್ಕಾರದ ವತಿಯಿಂದ ಯುವಜನತೆಗಳಲ್ಲಿ ಜಾಗೃತಿ ಮೂಡಿಸಲು ಮದ್ಯಪಾನ ಸಂಯಮ ಮಂಡಳಿಯವರಿಂದ ಇಂತಹ ವಿಚಾರ ಸಂಕಿರಣ ಕಾರ್ಯಕ್ರಮಗಳನ್ನು ಏರ್ಪಡಿಸಿ ಜಾಗೃತಿ ಮಾಡಿಸಲಾಗುತ್ತಿದೆ ಆದ್ದರಿಂದ ವಿದ್ಯಾರ್ಥಿಗಳು ಎಲ್ಲ ರಿತಿಯ ದುಷ್ಚಟಗಳಿಂದ ದೂರ ಇಂದು ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಲು ಕೈಜೋಡಿಸಬೇಕೆಂದರು.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯ ನಾಗಭೂಷಣ ಮಠ ಅವರು ಮಾತನಾಡಿದರು,

ಕಾರ್ಯಕ್ರಮದಲ್ಲಿ ಶಿವಶಂಕರ ಟೋಕರೆ, ಔರಾದ ರೂರಲ್ ಐಟಿಐ ಕಾಲೇಜಿನ ಪ್ರಾಚಾರ್ಯ ರಾಜಕುಮಾರ ಮಾಳಗೆ, ಔರಾದ (ಬಾ) ಪಟ್ಟದೇವರು ಐಟಿಐ ಕಾಲೇಜಿನ ಪ್ರಾಚಾರ್ಯ ಸತೀಶ ಗಂದಿಗುಡಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕ ಅಧ್ಯಕ್ಷ ಪಂಡರಿ ಆಡೆ, ಸರ್ಕಾರ ಕೈಗಾರಿಕಾ ತರಬೇತಿ ಸಂಸ್ಥೆ ಬೀದರನ ತರಬೇತಿ ಅಧಿಕಾರಿ ಬಾಬು ಪ್ರಭಾಜಿ, ಔರಾದ ಸರ್ಕಾರ ಕೈಗಾರಿಕಾ ತರಬೇತಿ ಸಂಸ್ಥೆಯ ತರಬೇತಿ ಅಧಿಕಾರಿ ಯುಸುಫ ಮಿಯಾ, ವಾರ್ತಾ ಇಲಾಖೆಯ ವಿಜಯಕೃಷ್ಣ ಸೇರಿದಂತೆ ಕೈಗಾರಿಕಾ ತರಬೇತಿ ಸಂಸ್ಥೆಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಇಂದು ಸ್ವಾಭಿಮಾನಿಗಳ ಕಾಲ್ನಡಿಗೆ ಜಾಥಾ ಆರಂಭ: ಮುರುಗೇಶ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 05 : ಇಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ನಗರದ ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ರಾಜ್ಯದಲ್ಲಿ ಸುಮಾರು 200 ಮಿಟರ್ ಎತ್ತರದ ಭವ್ಯವಾದ ಅಂಬೇಡ್ಕರ್ ಮೂರ್ತಿ ನಿರ್ಮಿಸಬೇಕು ಹಾಗೂ ಸತ್ಯಮೇವ ಜಯತೆ ಲಾಂಛನವನ್ನು ಕನ್ನಡ ಪದಕ್ಕೆ ಬದಲಾವಣೆ ಮಾಡುವಂತೆ ಒತ್ತಾಯಿಸಿ 40 ದಿವಸಗಳ ಸ್ವಾಭಿಮಾನಿಗಳ ಕಾಲ್ನಡಿಗೆ ಜಾಥಾ ಉದ್ಘಾಟನೆಗೊಳ್ಳಲಿದೆ ಎಂದು ಭೀಮ್ ಪ್ರಜಾ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ವೈಟ್ ಫೀಲ್ಡ್ ಮರುಗೇಶ ತಿಳಿಸಿದರು.

ಬುಧವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಗುಜರಾತಿನಲ್ಲಿ ಸರ್ದಾರ ವಲ್ಲಭಭಾಯಿ ಪಟೇಲ ಅವರ 182 ಮಿಟರ್ ಉದ್ದದ ಮೂರ್ತಿ ಇದೆ. ತೆಲಂಗಾಣಾ ಹಾಗೂ ಆಂಧ್ರ ಪ್ರದೇಶಗಳಲ್ಲಿ ಬಾಬಾ ಸಾಹೇಬರ 125 ಮಿಟರ್ ಉದ್ದದ ಮೂರ್ತಿಗಳಿದ್ದು, ನಮ್ಮ ರಾಜ್ಯದಲ್ಲಿ 656 ಅಡಿ ಎತ್ತರದ ಮೂರ್ತಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ಅರೆಹಳ್ಳಿ ಗ್ರಾಮದ ಸರ್ವೆ ನಂ 63ರಲ್ಲಿ ಈ ಭವ್ಯವಾದ ಮೂರ್ತಿ ಸ್ಥಾಪಿಸಬೇಕು. ಅಲ್ಲಿ 40 ಎಕರೆ ಸರ್ಕಾರದ ಜಾಗವಿದ್ದು, ಅದರಲ್ಲಿ 10 ಎಕರೆ ಮೂರ್ತಿ ನಿರ್ಮಿಸಿ ಉಳಿದ ಜಾಗದಲ್ಲಿ ಉದ್ಯಾನವನ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಮಾಡುವಂತೆ ಒತ್ತಾಯಿಸಿದರು.

ಎಸ್.ಈ.ಪಿ, ಟಿ.ಎಸ್.ಪಿ ಹಣ ಯಾವುದೇ ಕಾರಣಕ್ಕೂ ಈವ? ಅನ್ಯ ಕಾರ್ಯಗಳಿಗೆ ಬಳಿಸಕೂಡದು, ಎಸ್.ಸಿ, ಎಸ್.ಟಿ ವಿದ್ಯಾರ್ಥಿಗಳಿಗೆ ಐ.ಎ.ಎಸ್, ಐ.ಪಿ.ಎಸ್, ಕೆ.ಎ.ಎಸ್ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು. ರಾಜ್ಯದ ಎಲ್ಲ ಗ್ರಾಮಗಳಲ್ಲಿ ಪರಿಶಿಷ್ಟರಿಗೆ ತಲಾ ಎರಡು ಎಕರೆ ಜಮಿನು ಖರಿದಿಸಿ ಸ್ಮಶಾನ ಭೂಮಿ ಮಂಜುರಿ ಮಾಡಬೇಕೆಂಬ ಬೇಡಿಕೆಗಳನ್ನು ಇಟ್ಟುಕೊಂಡು ರಾಜ್ಯದೆಲ್ಲೆಡೆ ಸುಮಾರು 40 ದಿನಗಳ ಕಾಲ ಜಾಥಾ ಹಮ್ಮಿಕೊಂಡು ಏಪ್ರಿಲ್ 14ರಂದು ಬಾಬಾ ಸಾಹೇಬರ ಜಯಂತಿಯಂದು ರಾಜ್ಯ ರಾಜ್ಯಧಾನಿ ಫ್ರಿಡಂ ಪಾರ್ಕ್‌ನಲ್ಲಿ ಕೊನೆಗೊಳಿಸಲಾಗುವುದೆಂದು ವಿವರಿಸಿದರು. ಜಾಥಾ ಹೊದಲ್ಲೆಲ್ಲ ನಮ್ಮ ಜನಾಂಗದವರಿಗೆ ಜಾಗೃತಿ ಮೂಡಿಸಲಾಗುವುದು. ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು. 200 ಮೀಟರ್‌ಕ್ಕಿಂತ ಕಡಿಮೆ ಪ್ರಮಾಣದ ಮೂರ್ತಿ ನಿರ್ಮಾಣಕ್ಕೆ ಯಾವುದೇ ಕಾರಣಕ್ಕೂ ಒಪ್ಪಲಾಗದು. ಸರ್ಕಾರ ಈ ವಿಷಯದಲ್ಲಿ ಭಂಡತನ ತೊರಿ ಕಾಟಾಚಾರಕ್ಕೆ ಸಣ್ಣ ಮೂರ್ತಿ ನಿರ್ಮಿಸಿದರೆ ರಾಜ್ಯ ಸರ್ಕಾರದ ವಿರೂದ್ಧ ಉಗ್ರವಾದ ಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಸಿದರು.

ಆರ್.ಪಿ.ಐ ಅಂಬೇಡ್ಕರ್ ಪಕ್ಷದ ರಾಜ್ಯಾಧ್ಯಕ್ಷ ಮಹೆಶ ಗೋರನಾಳಕರ್ ಮಾತನಾಡಿ, ಇಂದಿನ ಜಥಾವನ್ನು ಮನ್ನಾಯಿಖೆಳ್ಳಿ ಬಳಿಯ ರೇಕುಳಗಿ ಮೌಂಟ್ ಬೌದ್ಧ ವಿಹಾರದ ಪೂಜ್ಯ ಭಂತೆ ರೇವತ್ ಹಾಗೂ ಅಣದೂರಿನ ಪೂಜ್ಯ ಭಂತೆ ಸಂಘರಖಿತ ಅವರು ಜಾಥಾಕ್ಕೆ ಚಾಲನೆ ನೀಡುವರು. ಎಲ್ಲ ಸಂಘಟನೆಗಳ ಪ್ರಮುಖರನ್ನು ಕಾರ್ಯಕ್ರಮಕ್ಕೆ ಅವ್ಹಾನಿಸಲಾಗಿದೆ. ಜಿಲ್ಲೆಯ ಅಂಬೇಡ್ಕರ್ ಅಭಿಮಾನಿಗಳು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಇಂದಿನ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದರು. ದಲಿತ ಮುಖಂಡರಾದ ಡಾ.ಕಾಶಿನಾಥ ಚಲವಾ ಮಾತನಾಡಿ, ರಾಜ್ಯ ಸರ್ಕಾರ ಬುದ್ಧ ಪೂರ್ಣಿಮೆಗೆ ರಜೆ ಘೋಷಿಸಬೇಕು ಹಾಗೂ ಬೀದರ್‌ನಲ್ಲಿ ಭವ್ಯವಾದ ಅಂಬೇಡ್ಕರ್ ಭವನ ನಿರ್ಮಿಸಬೇಕೆಂದು ಒತ್ತಾಯಿಸಿದರು. ಸಾಹಿತಿ ಶರಣು ಫುಲೆ ಹಾಗೂ ಪ್ರಕಾಶ ರಾವಣ ಮಾತನಾಡಿದರು.

ದಲಿತ ಮುಖಂಡರಾದ ಸಂಜುಕುಮಾರ ಮೇತ್ರೆ, ಎ.ಜಿ ಕೃಷ್ಣಮೂರ್ತಿ, ಸಿ.ನಾಗರಾಜ, ಮುನಿರಾಜು,

ಅರವಿಂದ ಬನಸೊಡೆ, ಮಾರೂತಿರಾವ ಕಾಂಬಳೆ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## 'ಲಿಂಗಾಯತ ಧರ್ಮವಲ್ಲ' ಹೇಳಿಕೆ: ಬಸವಾದಿ ಶರಣರಿಗೆ ಅಪಮಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 05 : ಲಿಂಗಾಯತ ಧರ್ಮವೇ ಅಲ್ಲವೆಂದು ಬಾಳೆಹೊನ್ನೂರು ರಂಭಾಪುರಿ ವೀರಸೋಮೇಶ್ವರ ಸ್ವಾಮೀಜಿ ನೀಡಿರುವ ಹೇಳಿಕೆ ಬಸವಾದಿ ಶರಣರಿಗೆ ಮಾಡಿದ ಅಪಮಾನವಾಗಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾ ಕೇಂದ್ರ ಸಮಿತಿಯ ಉಪಾಧ್ಯಕ್ಷ ಬಸವರಾಜ ಧನ್ನೂರ ಕಳವಳ ವ್ಯಕ್ತಪಡಿಸಿದ್ದಾರೆ.

'ವೀರಶೈವ ಸೈದ್ಧಾಂತಿಕ ಧರ್ಮ. ಲಿಂಗಾಯತ ಪದ ರೂಢಿಯಿಂದ ಬಂದದ್ದು. ಅದು ಧರ್ಮವಾಗಲು ಸಾಧ್ಯವೇ ಇಲ್ಲ' ಎಂಬ ಶ್ರೀಗಳ ಹೇಳಿಕೆ ಯಾರೂ ಒಪ್ಪುವಂಥದ್ದಲ್ಲ ಎಂದು ತಿಳಿಸಿದ್ದಾರೆ.

ಲಿಂಗಾಯತ ಧರ್ಮ ಬಸವಣ್ಣನವರು ಸ್ಥಾಪಿಸಿದ ಧರ್ಮ. ವೀರಶೈವ ಧರ್ಮ ಅಲ್ಲ. ಲಿಂಗಾಯತ ಧರ್ಮದ 102 ಒಳ ಪಂಗಡಗಳಲ್ಲಿ ಅದು ಒಂದು ಎಂದು ಹೇಳಿದ್ದಾರೆ.

ಲಿಂಗಾಯತ ಧರ್ಮ ಉದಯವಾದದ್ದು 12ನೇ ಶತಮಾನದಲ್ಲಿ. ಇಷ್ಟಲಿಂಗ ಧರಿಸುವವರೆಲ್ಲ ಲಿಂಗಾಯತರು. ಬಸವಣ್ಣನವರು ಇಷ್ಟಲಿಂಗದ ಜನಕ. ಅವರಿಗಿಂತ ಮುಂಚೆ ಇಷ್ಟಲಿಂಗದ ಪರಿಕಲ್ಪನೆ ಇರಲಿಲ್ಲ ಎಂದು ತಿಳಿಸಿದ್ದಾರೆ.

ಒಂದೆಡೆ ಬಸವಣ್ಣನವರು ಸಮಾಜ ಒಗ್ಗೂಡಿಸುವ ಕೆಲಸ ಮಾಡಿದ್ದರು ಎಂದು ಹೇಳುತ್ತ, ಮತ್ತೊಂದೆಡೆ ಅವರು ಸ್ಥಾಪಿಸಿದ ಲಿಂಗಾಯತ ಧರ್ಮವು ಧರ್ಮವಲ್ಲ ಎಂಬುದು ಎಷ್ಟು ಸರಿ ಎಂದು ಪ್ರಶ್ನಿಸಿದ್ದಾರೆ.

ಏಕಕಾಲಕ್ಕೆ ಎರಡು ದೋಣಿಗಳಲ್ಲಿ ಸಂಚರಿಸಲು ಆಗುವುದಿಲ್ಲ. ಕಾರಣ, ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು.



ಲಿಂಗಾಯತ ಧರ್ಮವೇ ಅಲ್ಲ ಎನ್ನುವುದಾದರೆ ಶ್ರೀಗಳು ಬಸವಾದಿ ಶರಣರ ಬಗ್ಗೆ ಪ್ರಸ್ತಾಪಿಸದಿರುವುದೇ ಒಳ್ಳೆಯದು ಎಂದು ತಿಳಿಸಿದ್ದಾರೆ.

ಜಾಗತಿಕ ಲಿಂಗಾಯತ ಮಹಾಸಭಾ ಹುಟ್ಟಿಕೊಂಡು ಐದೇ ವರ್ಷಗಳಾದರೂ ಸಂಸ್ಥೆಗೆ ನಾಡಿನಾದ್ಯಂತ ಸಾವಿರಾರು ಜನ ಸ್ವಯಂ ಪ್ರೇರಣೆಯಿಂದ ಸದಸ್ಯರಾಗಿದ್ದಾರೆ. ಸಂಸ್ಥೆ ಲಿಂಗಾಯತ ಧರ್ಮದ ಸಂಘಟನೆ ಹಾಗೂ ಬಸವ ತತ್ವ ಪ್ರಚಾರಕ್ಕೆ ಹಗಲಿರುಳು ಶ್ರಮಿಸುತ್ತಿದೆ. ಶರಣರ ಆಶಯ ಹಾಗೂ ತತ್ವಗಳಿಗೆ ಚ್ಯುತಿ ತರುವ ಯಾವುದೇ ಕೆಲಸ ಮಾಡಿಲ್ಲ ಎಂದು ಹೇಳಿದ್ದಾರೆ.

ಸಂಸ್ಥೆಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಸಮಾಜದ ಎಲ್ಲರ ಬಗ್ಗೆಯೂ ಗೌರವ ಇದೆ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ, ಸಮುದಾಯದ ಒಳಿತಿಗಾಗಿ ಒಗ್ಗೂಡಿ ಕೆಲಸ ಮಾಡುವ ದಿಸೆಯಲ್ಲೇ ಹೆಜ್ಜೆ ಇಡುತ್ತಿದೆ. ಅದಾಗಿಯೂ ಜಾಗತಿಕ ಲಿಂಗಾಯತ ಮಹಾಸಭೆಯನ್ನು ತೆಗಳುತ್ತಿರುವುದು ಯಾವ ಕಾರಣಕ್ಕಾಗಿ ಎಂದು ಕೇಳಿದ್ದಾರೆ.

ಜಾಗತಿಕ ಲಿಂಗಾಯತ ಮಹಾಸಭಾ ಸಮಾಜವನ್ನು ಛಿದ್ರಗೊಳಿಸುತ್ತಿಲ್ಲ. ಸಂಘಟಿಸುತ್ತಿದೆ. ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆ ದೊರೆತರೆ ಛಿದ್ರವಾಗಿರುವ ಲಿಂಗಾಯತದ ಎಲ್ಲ ಒಳಪಂಗಡಗಳೂ ಒಂದಾಗಲಿವೆ. ಸಮಾಜದಲ್ಲಿರುವ ಬಡವರಿಗೆ ಸರ್ಕಾರದ ವಿವಿಧ ಸೌಲಭ್ಯಗಳು ಸಿಗಲಿದೆ. ಕಾರಣ, ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯೇ ಮಹಾಸಭಾದ ಗುರಿಯಾಗಿದೆ. ಇದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಹೇಳಿದ್ದಾರೆ.

ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆ ಹೋರಾಟಕ್ಕೆ ದೊಡ್ಡ ಮಟ್ಟದಲ್ಲಿ ಬೆಂಬಲ ದೊರಕಿತ್ತು. ಆಗಲೇ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆ ಸಿಗುತ್ತಿತ್ತು. ಆದರೆ, ಕೆಲವರು ಸಮಾಜದ ದಿಕ್ಕುತಪ್ಪಿಸಿದ್ದರಿಂದಲೇ ಮಾನ್ಯತೆ ವಿಳಂಬವಾಗುತ್ತಿದೆ ಎಂದು ತಿಳಿಸಿದ್ದಾರೆ.

## ಸುಂದರ ಬದುಕಿಗೆ ಬಸವಣ್ಣನವರ ಸಪ್ತ ಸೂತ್ರ ಪಾಲಿಸಿ: ಹುಲಸೂರುಶ್ರೀ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮಾ.5: ತಾಲ್ಲೂಕಿನ ಶಿವಣಿ ಗ್ರಾಮದಲ್ಲಿ ಹನ್ನೊಂದು ದಿನಗಳ ಹಾವಗಿ ಸ್ವಾಮಿ ಜಾತ್ರೆ ಹಾಗೂ ಜಗದ್ಗುರು ರೇಣುಕಾಚಾರ್ಯರ ಯುಗಮಾನೋತ್ಸವ ಭಾನುವಾರ ಆರಂಭಗೊಂಡಿತು.

ಮಠದಲ್ಲಿ ಸಂಜೆ ನಡೆದ ಸಮಾರಂಭದಲ್ಲಿ ಹುಲಸೂರಿನ ಗುರುಬಸವೇಶ್ವರ ಸಂಸ್ಥಾನ ಮಠದ ಶಿವಾನಂದ ಸ್ವಾಮೀಜಿ ಚಾಲನೆ ನೀಡಿದರು.

ಸುಂದರ ಜೀವನಕ್ಕೆ ಪ್ರತಿಯೊಬ್ಬರೂ ಬಸವಣ್ಣನವರ ಸಪ್ತಸೂತ್ರಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ' ಎಂಬ ಸೂತ್ರಗಳೇ ಸಪ್ತಸೂತ್ರಗಳು. ಇವುಗಳನ್ನು ಪಾಲಿಸಿದ್ದಲ್ಲಿ ಅಂತರಂಗ, ಬಹಿರಂಗ ಎರಡೂ ಶುದ್ಧವಾಗಿರುತ್ತವೆ ಎಂದು ತಿಳಿಸಿದರು.

ಸಾನಿಧ್ಯ ವಹಿಸಿದ್ದ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯರು ಮಾತನಾಡಿ, ಶಿವಣಿ ಹೆಸರಲ್ಲೇ 'ಶಿವ' ಎಂಬ ಪದವಿದೆ. ಈ ಗ್ರಾಮದಲ್ಲಿ ಜನಿಸಿದವರು ಧನ್ಯರು. ಹಾವಗಿ ಸ್ವಾಮಿ ಇಲ್ಲಿ ತಪೋ ಅನುಷ್ಠಾನ ಕೈಗೊಂಡಿದ್ದರು. ಭಕ್ತರ ಇಷ್ಟಾರ್ಥ ಪೂರೈಸುವ ಶಕ್ತಿ ಅವರ ಕರ್ತೃ ಗದ್ದುಗೆಗೆ ಇದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಸದಸ್ಯ ಶ್ರೀನಿವಾಸ್ ಬಿರಾದಾರ, ಪ್ರಮುಖರಾದ ಸಿದ್ರಾಮ ಬೋಗಳೆ, ಬಸವರಾಜ ಬಿರಾದಾರ ಉಪಸ್ಥಿತರಿದ್ದರು. ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು

ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ವಿಶೇಷಚೇತನ ಕಲಾವಿದರ ರಾಜ್ಯಮಟ್ಟದ ಕಲಾ ಪ್ರತಿಭೋತ್ಸವ 8ಕ್ಕೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 05 : ಕಾಡವಾದದ ಜೀವನ ಪ್ರಕಾಶ ಕಲ್ಚರಲ್ ಆಯಿಂಡ್ ವೆಲ್‌ಫೇರ್ ಸೊಸೈಟಿ ವತಿಯಿಂದ ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ಮಾರ್ಚ್ 8 ರಂದು ಬೆಳಿಗ್ಗೆ 10ಕ್ಕೆ ವಿಶೇಷಚೇತನ ಕಲಾವಿದರ ರಾಜ್ಯಮಟ್ಟದ ಕಲಾ ಪ್ರತಿಭೋತ್ಸವ ಹಮ್ಮಿಕೊಳ್ಳಲಾಗಿದೆ.



ವಿವಿಧೆಡೆಯ ವಿಶೇಷಚೇತನ ಕಲಾವಿದರು ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ವಚನ ಗಾಯನ, ಜಾನಪದ ಗಾಯನ, ನೃತ್ಯ, ತಾಳವಾದ್ಯ, ಅನುಕರಣೆ, ಏಕಪಾತ್ರಾಭಿನಯ ಮೊದಲಾದ ವೈವಿಧ್ಯಮಯ ಕಲಾಪ್ರಕಾರಗಳನ್ನು ಪ್ರದರ್ಶಿಸಲಿದ್ದಾರೆ ಎಂದು ಸೊಸೈಟಿಯ ಅಧ್ಯಕ್ಷ ದಿಲೀಪ್ ಕಾಡವಾದ ತಿಳಿಸಿದ್ದಾರೆ.

ಕವಿಗೋಷ್ಠಿ, ಕೃತಿ ಹಾಗೂ ಧ್ವನಿ ಸುರುಳಿ ಬಿಡುಗಡೆ–ಯೂ ನಡೆಯಲಿದೆ ಎಂದು ಹೇಳಿದ್ದಾರೆ.

ಕಲಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದ್ದಾರೆ.

## ಶಿಕ್ಷಕರು ಮಕ್ಕಳಲ್ಲಿ ಸಂಸ್ಕಾರದ ಬೀಜ ಬಿತ್ತಬೇಕು:ಗೊರಚಿಕ್ಕನವರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.5– ಶಾಲೆಗಳಲ್ಲಿ ಶಿಕ್ಷಕರು ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರದ ಗುಣಗಳನ್ನು ಬೆಳೆಸಬೇಕಿದೆ ಎಂದು ಪ್ರಾಧ್ಯಾಪಕ ಎ.ಎಂ. ಗೊರಚಿಕ್ಕನವರ ಹೇಳಿದರು.

ಸಮೀಪದ ಬೇವೂರ ಗ್ರಾಮದ ಸರ್ಕಾರಿ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಜರುಗಿದ ವಾರ್ಷಿಕೋತ್ಸವ, 7 ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳಿಗೆ ಜೀವನ ಮೌಲ್ಯಗಳನ್ನು ಕಲಿಸಬೇಕಾದ ಅಗತ್ಯತೆಯಿದೆ ಎಂದರು. ಶರಣ, ದಾಸ ಹಾಗೂ ಜನಪದ ಸಾಹಿತ್ಯದ ಚಿಂತನೆ, ಆಶಯಗಳನ್ನು ಮಕ್ಕಳಿಗೆ ತಿಳಿಸಿ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ ನೀಡಬೇಕಿದೆ. ಸೃಜನಶೀಲರನ್ನಾಗಿ ಮಾಡಿ ದೇಶದ ಆಸ್ತಿಯನ್ನಾಗಿ ರೂಪಿಸಬೇಕಿದೆ ಎಂದು ಗೊರಚಿಕ್ಕನವರ ಹೇಳಿದರು.

ಸಸಿಗೆ ನೀರೆರೆದು ಸಮಾರಂಭ ಉದ್ಘಾಟಿಸಿದ ಶಿಕ್ಷಣ ಪ್ರೇಮಿ ಮುರುಗೆಪ್ಪ ವೈಜಾಪೂರ, ಮಕ್ಕಳು ಪುಸ್ತಕ ಪ್ರೇಮಿಗಳಾಗಿ ಸಾಧಕರಾಗಬೇಕು. ವಿದ್ಯಾರ್ಥಿ ಹಂತದಲ್ಲೇ ಸೃಜನಶೀಲತೆಯನ್ನು ರೂಢಿಸಿಕೊಂಡರೆ ಮುಂದೆ ನಾಡಿನ ಆಸ್ತಿಯಾಗಿ ಬೆಳೆಯುತ್ತಾರೆ ಎಂದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ, ಪ್ರಶಸ್ತಿ ಪತ್ರ ವಿತರಿಸಲಾಯಿತು. ಶಾಲೆಯ ಮುಖ್ಯಗುರುಮಾತೆ ಪ್ರೇಮಾ ಉದಗಟ್ಟಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷರುಗಳಾದ ಸಂಗಣ್ಣ ಶಿರೂರ, ರವಿ ತಳವಾರ, ಉಪಾಧ್ಯಕ್ಷೆ ರೇಣುಕಾ ಕರಕನ್ನವರ, ಸದಸ್ಯರಾದ ಬಸವರಾಜ ತುಂಬಗಿ, ರತ್ನಾ ತೆಲಗಿ, ಬುದ್ಧಿವಂತಪ್ಪ ಮಾದರ, ಶಿವಣ್ಣ ಬಂಡಿವಡ್ಡರ, ಮುಖ್ಯಗುರು ಬಸವರಾಜ ಶೆಟ್ಟಿ, ಶಿಕ್ಷಕರಾದ ಬಿ.ಕೆ.ಬಡಿಗೇರ, ಆರ್.ವಾಯ್. ಕೋಟಿ, ಎಸ್.ಆರ್.ನದಾಫ ಅತಿಥಿಗಳಾಗಿದ್ದರು. ಶಿವಲೀಲಾ ಮರಿಗೌಡರ ನಿರೂಪಿಸಿ ವಂದಿಸಿದರು.

## "ಅಂತರ ಜಿಲ್ಲಾ ಯುವ ವಿನಿಮಯ" ಕಾರ್ಯಕ್ರಮದಲ್ಲಿ ಪ್ರೊ. ಎಂ.ಮುನಿರಾಜು ಸಾಂಸ್ಕೃತಿಕ ಕಲೆಗಳು ವಿನಿಮಯವಾಗಲಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.05–ಶೈಕ್ಷಣಿಕ ರಂಗದಲ್ಲಿ ರಾಜ್ಯದೆಲ್ಲೆಡೆ ಇರುವ ವೈವಿಧ್ಯಮಯ ಸಾಂಸ್ಕೃತಿಕ ಕಲೆಗಳು ಯುವ ಸಮುದಾಯಕ್ಕೆ ವಿನಿಮಯವಾಗಬೇಕು ಎಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಎಂ.ಮುನಿರಾಜು ಅವರು ಹೇಳಿದರು.

ಬುಧವಾರ ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಜೀವ ವಿಜ್ಞಾನ ಸಭಾಂಗಣದಲ್ಲಿ ಭಾರತ ಸರ್ಕಾರ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದ ಮೈಭಾರತ್–ನೆಹರು ಯುವ ಕೇಂದ್ರ,ಬಳ್ಳಾರಿ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ಘಟಕದ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ನಡೆಯಲಿರುವ 5 ದಿನಗಳ "ಅಂತರ ಜಿಲ್ಲಾ ಯುವ ವಿನಿಮಯ" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯವು ಹಲವಾರು ವೈವಿಧ್ಯಮಯ ಕಲೆಗಳ ತವರೂರಾಗಿದೆ. ನಮ್ಮಲ್ಲಿ ಪ್ರದೇಶವಾರು ವಿಭಿನ್ನ ಸಾಂಸ್ಕೃತಿಕ ಪರಂಪರೆಗಳನ್ನು ಕಾಣಬಹುದಾಗಿದ್ದು,ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ವರದಾನವಾಗಿವೆ ಎಂದರು.

ದೇಶವು 2047ರ ಹೊತ್ತಿಗೆ ಶೇ.80 ಯುವಕರನ್ನು ಹೊಂದಲಿದೆ. ಯುವಕರು ತಮ್ಮಲ್ಲಿರುವ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪ್ರತಿಭೆಗಳನ್ನು ವಿನಿಮಯ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ವಿಶ್ವವಿದ್ಯಾಯದ ಕುಲಸಚಿವರಾದ ಎಸ್.ಎನ್.ರುದ್ರೇಶ್ ಅವರು ಮಾತನಾಡಿ,ಉತ್ತರಕರ್ನಾಟಕವು ಜನಪದ ಕಲೆಗಳ ಬೀಡಾಗಿದೆ. ನಮ್ಮಲ್ಲಿಯ ದೇಸಿ ಕಲೆಗಳ ಕುರಿತು ಇಂದಿನ ಯುವಕರಿಗೆ ಅರಿವೇ ಇಲ್ಲ. ಅವುಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ಯುವಕರ ಮೇಲಿದೆ. ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ನಾವು ರೂಢಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಸದಸ್ಯರಾದ ಡಾ.ಹೆಚ್.ಸಿ ರಾಘವೇಂದ್ರ ಅವರು ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಕೌಶಲ್ಯ ಆಧಾರಿತ ಶಿಕ್ಷಣ ಮಹತ್ವಪೂರ್ಣವಾಗಿದೆ. ಜನಪದ ಕಲೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನೆಹರು ಯುವ ಕೇಂದ್ರದ ಜಿಲ್ಲಾ ಅಧಿಕಾರಿಗಳಾದ ಮೊಂಟು ಪತ್ತಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿನಿಮಯ ಕಾರ್ಯಕ್ರಮದಲ್ಲಿ ಬಳ್ಳಾರಿ ವಿವಿಯಿಂದ 27 ವಿದ್ಯಾರ್ಥಿಗಳನ್ನು ತುಮಕೂರಿಗೆ ಹಾಗೂ ತುಮಕೂರು ವಿವಿಯಿಂದ 25 ವಿದ್ಯಾರ್ಥಿಗಳು ಬಳ್ಳಾರಿಯಲ್ಲಿ ಭಾಗವಹಿಸಿದ್ದಾರೆ.

ಈ ಸಂದರ್ಭದಲ್ಲಿ ವಿವಿಯ ವಿದ್ಯಾರ್ಥಿ ಕಲ್ಯಾಣ ಘಟಕ ನಿರ್ದೇಶಕರಾದ ಪ್ರೊ. ಶಶಿಕಾಂತ ಮಜಗಿ,ನೆಹರು ಯುವ ಕೇಂದ್ರ ಕಾರ್ಯಕ್ರಮ ಅಧಿಕಾರಿಗಳಾದ ರಾಮ್‌ರಾವ್ ಬಿರಾದಾರ್ ವೇದಿಕೆಯಲ್ಲಿದ್ದರು.

ನಾಟಕ ಹಾಗೂ ಪ್ರದರ್ಶನ ಕಲೆ ವಿಭಾಗದ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ತಂಡದಿಂದ ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಲಾಯಿತು. ಐದು ದಿನಗಳ ವಿನಿಮಯ ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಪ್ರದರ್ಶನಗಳನ್ನು ವಿದ್ಯಾರ್ಥಿಗಳು ನೀಡಲಿದ್ದಾರೆ.

ಕಾರ್ಯಕ್ರಮವನ್ನು ಡಾ.ಶಶಿಧರ ಕೆಲ್ಲೂರು ನಿರೂಪಿಸಿದರು. ಈ ಸಂದರ್ಭದಲ್ಲಿ ವಿವಿಧ ನಿಕಾಯಗಳ ಡೀನರು,ವಿಭಾಗಗಳ ಮುಖ್ಯಸ್ಥರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

## ಮಡಿವಾಳ ಮಾಚಿದೇವರ ತತ್ವ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ: ಅಮ್ಜದ್ ಪಟೇಲ್



ಮಲ್ಲಮ ನುಡಿ ವಾರ್ತೆ

ಕೊಪ್ಪಳ : ಮಡಿವಾಳ ಸಮಾಜವು ಉನ್ನತ ಮಟ್ಟದ ಸ್ಥಾನ ತಲುಪಬೇಕಾದರೆ, ಶ್ರೀ ಮಡಿವಾಳ ಮಾಚಿದೇವರು ಹಾಕಿ ಕೊಟ್ಟಿರುವ ತತ್ವ ಸಂದೇಶಗಳನ್ನು ಜೀವನದಲ್ಲಿ ಅಳವಡಿಕೆ ಮಾಡಿಕೊಂಡಾಗ ಮಾತ್ರ ಸಾಧ್ಯವಾಗಿದೆ ಎಂದು ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ ಪಟೇಲ್ ಹೇಳಿದರು.

ಅವರು ಬುಧವಾರ ಕೊಪ್ಪಳ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಾಹಿತ್ಯಭವನದಲ್ಲಿ ಹಮ್ಮಿಕೊಂಡಿದ್ದ ಶ್ರೀ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಡಿವಾಳ ಮಾಚಿದೇವ ರವರು 12ನೇ ಶತಮಾನದಲ್ಲಿ ಬಿಜಾಪುರ ಜಿಲೆಯ ಸಿಂಧಗಿ ತಾಲೂಕಿನ ದೇವರಹಿಪ್ಪರಗಿಯಲ್ಲಿ' ಪರುವತಯ್ಯ ಮತ್ತು ಸುಜ್ಞಾನವ್ವ ದಂಪತಿಗಳ ಪುತ್ರರತ್ನ–ಶರಣ ಕಿರಣನಾಗಿ ಜನಿಸಿದರು. ಮಡಿವಾಳ ಮಾಚಿದೇವ ಕನ್ನಡದ ಶಿವಶರಣರಲ್ಲಿಯೆ ಅತ್ಯಂತ ಹಿರಿಯರು. ಬಸವಣ್ಣನವರು ಕಲ್ಯಾಣದಲ್ಲಿ ಅನುಭವ ಮಂಟಪ ಕಟ್ಟುವಲ್ಲಿ ಮಡಿವಾಳ ಮಾಚಿದೇವರ ಕಾಯಕ ಅತಿ ಮಹತ್ವದ್ದು. ದೇಶದ ನಾನಾ ಭಾಗಗಳಿಂದ ಕಲ್ಯಾಣಕ್ಕೆ ಬರುವವರಿಗೆ ಪರೀಕ್ಷಿಸಿ, ಸ್ವಾಗತಿಸುವ ಕೆಲಸ ಅವರದಾಗಿತ್ತು. ಅವರು ಕೇವಲ ಬಟ್ಟೆಯ ಮೇಲೆನಿ ಮೈಲಿಗೆಯನ್ನ ತೋಳೆಯದೇ, ಅದ್ಭುತ ವಚನಗಳ ಮೂಲಕ ಮನಸ್ಸಿಗೆ ಅಂಟಿಕೊಂಡಿರುವ ಕೋಳೆಯನ್ನ ತೋಳೆಯು ಕಾಯಕ ಮಾಡಿದರು. ಅವರು ರಚಿಸಿರುವ ವಚನಗಳಲ್ಲಿ 300 ವಚನಗಳು ದೊರಕಿವೆ ಎಂದರು.

ಮಡಿವಾಳ ಸಮಾಜದವರು ಎಲ್ಲಾ ಸಮಾಜದ ಭಾಂಧವರೊಂದಿಗೆ ಉತ್ತಮ ಸಂಬಂಧದೊಂದಿಗೆ ಇತರರ ಹಲವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. ಎಲ್ಲರೂ ಆರ್ಥಿಕವಾಗಿ ಸಬಲರಾಗಬೇಕಾದರೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ನಗರಸಭೆ ವತಿಯಿಂದ ತಮ್ಮ ಯಾವುದೇ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಳ ಕುರಿತು ಮನವಿ ಇದ್ದಲ್ಲಿ ನಾನು ಅದನ್ನ ಸ್ವೀಕರಿಸಿ ಅನುದಾನವನ್ನು ಬಿಡುಗಡೆ ಮಾಡುತ್ತೇನೆ. ತಮಗೆಲ್ಲರಿಗೂ ಮಡಿವಾಳ ಮಾಚಿದೇವ ಜಯಂತಿ ಶುಭಾಶಯಗಳು ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿದ ಚಿತ್ರದುರ್ಗ ಸಂಸ್ಥಾನ ಮಠದ ಶ್ರೀ ಜಗದ್ಗುರು ಡಾ. ಬಸವ ಮಾಚಿದೇವ ಸ್ವಾಮಿಜಿ ಅವರು ಮಾತನಾಡಿ, ಕಾಯಕ ಮತ್ತು ವಿಶಿಷ್ಟ ವಚನಗಳ ಮೂಲಕ ಸಮಾಜ ತಿದ್ದುವ ಕಾರ್ಯ ಮಾಡುವುದರ ಮೂಲಕ ಕಾಯಕ ಯೋಗಿ ಎನಿಸಿಕೊಂಡವರು ಶ್ರೀ ಮಡಿವಾಳ ಮಾಚಿದೇವರು. ಅವರ ಬದುಕಿನ ಚಿಂತನೆಗಳನ್ನು ನಾವು ತಿಳಿದುಕೊಳ್ಳಬೇಕು ಮತ್ತು ಇತರರಿಗೂ ತಿಳಿಸಬೇಕು. ಮಡಿವಾಳ ಮಾಚಿದೇವ ಅವರು ತಮ್ಮ ಕಾಯಕ ಮತ್ತು ವಚನಗಳ ಮೂಲಕ, ಸಮಸ್ತ ಮಾನವ ಕುಲಕ್ಕೆ ಆದರ್ಶವಾಗಿದ್ದಾರೆ. ಅದಕ್ಕೆ ಒಂದು ನಿದರ್ಶನ ಎಂದರೆ ಇವತ್ತು ಮೆರವಣಿಗೆ ಸಮಯದಲ್ಲಿ ಮುಸ್ಲಿಂ ಸಮುದಾಯದ ಯುವಕರು, ಕುಂಬ ಹೊತ್ತ ಹೆಣ್ಣು ಮಕ್ಕಳಿಗೆ ನೀರು ಮತ್ತು ಮಜ್ಜಿಗೆ ಕೊಡುತ್ತಿರುವ ದೃಶ್ಯ ಸಾಕಲ್ಲವೆ. ಮಡಿವಾಳ ಮಾಚಿದೇವರ ತತ್ವ ವಿಶ್ವಕ್ಕೆ ಸಾರುವಂತದ್ದು ಎಂದರು.

ಅನೇಕ ಶರಣರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಬೆಳಕನ್ನು ನೀಡಿದ್ದಾರೆ. ಅಂತಹ ಮಹನೀಯರುಗಳಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ವಿಶಿಷ್ಟ ವಚನಕಾರರಾಗಿ ರೂಪುಗೊಂಡವರು ಮಹಾನ್ ಶರಣ ಶ್ರೀ ಮಡಿವಾಳ ಮಾಚಿದೇವರು. ಜಯಂತಿ ಆಚರಣೆಯ ಜೊತೆಗೆ, ಅವರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜಯಂತಿ ಆಚರಣೆಯಿಂದ ನಮ್ಮ ಜೀವನ ಶೈಲಿಯನ್ನು ಬದಾಲಿಸಿಕೋಳ್ಳುವುದು ಅತ್ಯವಶ್ಯಕವಾಗಿದೆ ಎಂದು ಹೇಳಿದರು.

ಕೊಪ್ಪಳ ಸರ್ಕಾರಿ ಪ್ರಥಮ ದರ್ಜೆಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ನವೀನ್ ಕುಮಾರ್ ಬಿ. ಅವರು ಶ್ರೀ ಮಡಿವಾಳ ಮಾಚಿದೇವರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಮಡಿವಾಳ ಸಮಾಜದ ಪ್ರಮುಖರಾದ ಯೋಗೇಶ್ ಮಡಿವಾಳರ ಹಿಟ್ನಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ, ನಗರಾಭಿವೃದ್ಧಿ ಪ್ರಾಧಿಕಾರದ ಕೊಪ್ಪಳ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಕ್ಬರಪಾಶ ಪಲ್ಟನ್, ನಗರಸಭೆ ಸದಸ್ಯರಾದ ಅಜೀಮುದ್ದಿನ್ ಅತ್ತಾರ್, ಅರುಣ್ ಶೆಟ್ಟಿ, ಮಾಜಿ ಅಧ್ಯಕ್ಷ ಮಹಾಂತೇಶ ಪಾಟೀಲ್ ಮೈನಳ್ಳಿ, ಉದ್ಯಮಿ ಸೋಮಶೇಖರ್ ಹಿಟ್ನಾಳ್, ಸಲಿಮ್ ಅಳವಂಡಿ ಹಾಗೂ ಮಡಿವಾಳ ಸಮಾಜದ ಮುಖಂಡರಾದ ಕೃಷ್ಣ ಎಸ್. ಮಡಿವಾಳ ಸಮಾಜದ ಎಮ್.ಕೆ.ಹನುಮಂತಪ್ಪ, ಶಂಕ್ರಪ್ಪ ಹಾಲ್ಕೆರಿ, ರಾಮಣ್ಣ ಮಡಿವಾಳರ, ಬಸವರಾಜ ಬೆಳಗಲಿ, ದುರಗೇಶ ಮಡಿವಾಳರ, ಹುಲಗಪ್ಪ ಜಿ. ಮಡಿವಾಳರ, ಡಾ. ಸಂಗಮೇಶ ಕಲಹಾಳ, ಮಂಜುಳಾ ಮಲ್ಲಿಕಾರ್ಜುನ ಮಡಿವಾಳರ, ಕನಕಪ್ಪ ಹೊನ್ನಪ್ಪ ಮಡಿವಾಳರ, ಶಂಕ್ರಪ್ಪ ಮಡಿವಾಳರ, ಯಮನೂರಪ್ಪ ಬುಡ್ಡಪ್ಪ ಮಡಿವಾಳರ ಹಾಗೂ ಮತ್ತಿತರರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಅದ್ದೂರಿ ಮೇರವಣಿಗೆ: ಶ್ರೀ ಮಡಿವಾಳ ಮಾಚಿದೇವ ಜಯಂತಿ ನಿಮಿತ್ತ ಮಡಿವಾಳ ಮಾಚಿದೇವ ಭಾವಚಿತ್ರದ ಮೆರವಣಿಗೆಗೆ ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ ಅವರು ಚಾಲನೆ ನೀಡಿದರು.

## ಇಬ್ರಾಹಿಂ ಕುದರಿಮೋತಿ ಅವರಿಗೆ ಪಿಎಚ್ ಡಿ ಪದವಿ ಪ್ರಧಾನ



ಮಲ್ಲಮ ನುಡಿವಾರ್ತೆ

ಕೊಪ್ಪಳ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಯಲಬುರ್ಗಾದ ಇತಿಹಾಸ ಸಹಪ್ರಾಧ್ಯಾಪಕರಾದ ಇಬ್ರಾಹಿಂ ಕುದುರಿಮೋತಿ ಅವರಿಗೆ ಆಂಧ್ರಪ್ರದೇಶದ ಕುಪ್ಪಂನ ದ್ರಾವಿಡನ್ ವಿಶ್ವವಿಧ್ಯಾಲಯದ ಡಾಕ್ಟರೇಟ್ ಪದವಿ ಲಭಿಸಿದೆ.

ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಸಂಶೋಧನಾ ವಿದ್ಯಾರ್ಥಿ ಇಬ್ರಾಹಿಂ ಕುದುರಿಮೋತಿ ಅವರು ಡಾ ಶರಣಬಸಪ್ಪ ಪಿ. ಕೋಲ್ಕಾರ್ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ' ಆನೆಗೊಂದಿ ಹಿಸ್ಟರಿ ಅಂಡ್ ಆರ್ಟ್ ' ಎಂಬ ವಿಷಯದ ಕುರಿತು ನಡೆಸಿದ ಸಂಶೋಧನಾ ಮಹಾ ಪ್ರಬಂಧಕ್ಕೆ ಆಂಧ್ರಪ್ರದೇಶದ ಕುಪ್ಪಮ್ ದ್ರಾವಿಡಿಯನ್ ವಿಶ್ವವಿದ್ಯಾನಿಲಯ ಪಿಎಚ್ ಡಿ ಪದವಿ ನೀಡಿದೆ.

ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರುಗಳು ಬೋಧಕ ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಳೆಯ ವಿದ್ಯಾರ್ಥಿಗಳು ಹಾಗೂ ಅವರ ಬಂಧುಗಳು ಹರ್ಷ ವ್ಯಕ್ತಪಡಿಸಿದ್ದಾರೆ.

## ಸಹಕಾರಿ ಸಂಘಗಳ ಸಮಾಪನೆಗೆ ಕ್ರಮ: ಆಕ್ಷೇಪಣೆಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರುಮಾ.05–ಸಹಕಾರ ಇಲಾಖೆಯ ರಾಯಚೂರು ಉಪ ವಿಭಾಗದ ವ್ಯಾಪ್ತಿಯಲ್ಲಿ 06 ಸೌಹಾರ್ದ ಸಹಕಾರ ಸಂಘಗಳು ಸ್ಥಗಿತಗೊಂಡಿ–ದ್ದು, ಸಮಾಪನೆಗಾಗಿ ಕ್ರಮ ವಹಿಸಲು ಆಕ್ಷೇಪಣೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಐಶ್ವರ್ಯ ಮಹಿಳಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.ಗಿಲ್ಲೆಸುಗೂರ ಕ್ಯಾಂಪ್, ತಾ.ರಾಯಚೂರು ನೋಂದಣಿಸಂಖ್ಯೆ:974,ಕಲ್ಪತರು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.ರಾಯಚೂರು, ನೋಂದಣಿ ಸಂಖ್ಯೆ:1772,ಶ್ರೀ ಭೋಗೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ. ಕೆರಾಫ್ ಹೆಚ್.ಕೆ. ಗ್ರಾ ಫಿಕ್ಸ್, ಕಾರೋಬಾರಿ ಕಾಂಪ್ಲೆಕ್ಸ್, ಪ್ರಧಾನ ಅಂಚೆ ಕಚೇರಿ ಹತ್ತಿರ ರಾಯಚೂರು ನೋಂದಣಿ ಸಂಖ್ಯೆ:978,ಗಂಗಾಮತ ನೌಕರರ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ. ತಿಮ್ಮಾಪೂರು ಪೇಟೆ, ಗಂಗಾಪರಮೇಶ್ವರಿ ಕಾಂಪ್ಲೆಕ್ಸ್, ಮಂತ್ರಾಲಯ ರೋಡ್, ರಾಯಚೂರು ನೋಂದಣಿ ಸಂಖ್ಯೆ:2527, ದೇವಸಂಗಾ ಸೌಹಾರ್ದ ಪತ್ತಿನ ಸಹಕಾರಿ ನಿ.ದೇವಸೂಗೂರು, ನೋಂದಣಿ ಸಂಖ್ಯೆ:2524 ದಿ:29.11.2013 ತಾಲ್ಲೂಕು ಮಟ್ಟಕ್ಕಿಂತ ಕಡಿಮೆ.ಜನೋದಯ ಸ್ವಶಕ್ತಿ ಸೌಹಾರ್ದ ಸ್ವ–ಸಹಾಯ ಸಹಕಾರಿ ನಿ.ಮಾನ್ವಿ,ನೋಂದಣಿ ಸಂಖ್ಯೆ:965, ಶಿವ ಜನನಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ. ಶಿವ ನಿಲಯ, ಶ್ರೀ ಸೂಗೂರೇಶ್ವರ ಕಾಲೋನಿ, ದೇವದುರ್ಗ, ನೋಂದಣಿ ಸಂಖ್ಯೆ:1780,ಶ್ರೀ ಶಿವಂ ಪತ್ತಿನ ಸೌಹಾರ್ದ ಸಹಕಾರಿ ನಿ., ಸಜ್ಜನ್ ಕಾಂಪ್ಲೆಕ್ಸ್, ಶಹಾಪುರ ರಸ್ತೆ, ದೇವದುರ್ಗ, ನೋಂದಣಿ ಸಂಖ್ಯೆ:4162. ಸ್ಥಗಿತಗೊಂಡ ಈ ಸೌಹಾರ್ದ ಸಹಕಾರ ಸಂಘಗಳನ್ನು ಸಮಾಪನೆ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಸಕ್ಷಮ ನಿಬಂಧಕರಿಗೆ ಅಗತ್ಯ ದಾಖಲಾತಿಗಳೊಂದಿಗೆ 7 ದಿನಗಳೊಳಗಾಗಿ ಸಲ್ಲಿಸಬಹುದಾಗಿದೆ. ನಿಗಧಿತ ಕಾಲಾವಧಿಯಲ್ಲಿ ಯಾವುದೇ ಆಕ್ಷೇಪಣೆ ಮತ್ತು ಅದನ್ನು ಸಮರ್ಥಿಸುವ ದಾಖಲೆಗಳ ಸಹಿತ ಸಲ್ಲಿಸದಿದ್ದಲ್ಲಿ ಯಾವುದೇ ಆಕ್ಷೇಪಣೆವಿಲ್ಲ ಎಂದು ಪರಿಗಣಿಸಿ ಸದರಿ ಸ್ಥಗಿತ ಸೌಹಾರ್ದ ಸಹಕಾರ ಸಂಘಗಳ ಸಮಾಪನೆಗಾಗಿ ಕ್ರಮವಹಿಸಲಾಗುವುದೆಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿರವಾರ: ಮಾ.13ಕ್ಕೆ ಮಾರುಕಟ್ಟೆ ಹರಾಜು ಪ್ರಕ್ರಿಯೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮಾ.05 ಜಿಲ್ಲೆಯ ಸಿರವಾರ ಪಟ್ಟಣ ಪಂಚಾಯತ್ ವತಿಯಿಂದ 2025–26ನೇ ಸಾಲಿನ ಉಳಿದ ಅವಧಿಗೆ ವಾರ್ಷಿಕ ಮಾರುಕಟ್ಟೆ ಹರಾಜು ಪ್ರಕ್ರಿಯೆಯನ್ನು ಪಟ್ಟಣ ಪಂಚಾಯತಿಯ ನೂತನ ಕಾರ್ಯಾಲಯದ ಸಭಾಂಗಣದಲ್ಲಿ ಮಾ.13ರ ಬೆಳಿಗ್ಗೆ 11 ಗಂಟೆಗೆ ಕರೆಯಲಾಗಿದೆ ಎಂದು ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ವಾರದ ಮಾರುಕಟ್ಟೆಗೆ 50 ಸಾವಿರ ರೂ. ಹಾಗೂ ದಿನದ ಮಾರುಕಟ್ಟೆಗೆ 25 ಸಾವಿರ ರೂ.ಗಳ ಠೇವಣಿ ಮೊತ್ತವನ್ನು ಪಾವತಿಸಿ ಕರಾರು ಪತ್ರದ ಷರತ್ತಿಗೊಳಪಟ್ಟು ಗುರುತಿನ ಚೀಟಿಯೊಂದಿಗೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ವೇಳೆಯಲ್ಲಿ ಮುಖ್ಯಾಧಿಕಾರಿಗಳ ಅಥವಾ ಕಂದಾಯ ವಿಭಾಗದ ಸಿಬ್ಬಂದಿಯನ್ನು ಸಂಪರ್ಕಿಸಬಹುದು ಎಂದು ಸಿರವಾರ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಂಬಿದ ಭಕ್ತರನ್ನು ಉದ್ದರಿಸುವ ಕುಂಬಳಾವತಿಯ ಶ್ರೀ ದೊಡ್ಡಲಾಲ ಸಾಹೇಬ ಶರಣರು

(ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆಯ ಕುಷ್ಟಗಿ ತಾಲೂಕಿನ ಕುಂಬಳಾವತಿಯ ಶ್ರೀ ದೊಡ್ಡಲಾಲಸಾಬ್ ಶರಣ–ರ ದರ್ಗಾ ಕೂಡ ಒಂದು ಪವಿತ್ರವಾದ ಸ್ಥಳವಾಗಿದೆ.

ನಮ್ಮ ದೇಶದಲ್ಲಿ ಅನೇಕ ದೇವಸ್ಥಾನಗಳಿವೆ. ಕೆಲವೊಂದು ದೇವಾಲಯಗಳಿಗೆ ಅವುಗಳದೇ ಆದ ಚರಿತ್ರೆ, ಮಹಿಮೆ, ವಿಶೇಷತೆಗಳಿವೆ, ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕು, ಕುಂಬಳವತಿ ಶ್ರೀ ದೊಡ್ಡ ಲಾಲ್ ಸಾಬ್ ಶರಣರ ದರ್ಗಾ ಒಂದು ಗಜೇಂದ್ರಗಡ ಮಾರ್ಗದಿಂದ 17 ಕಿ.ಮೀ. ದೂರ ಮತ್ತು ಕುಷ್ಟಗಿ ಇಂದ 27 ಕಿ. ಮೀ ದೂರದ ಪುಣ್ಯಕ್ಷೇತ್ರ ಕುಂಬಳಾವತಿ ಶ್ರೀ ದ್ಯಾಮಣ್ಣ ಅಜ್ಜರ ಜಮೀನಿನಲ್ಲಿ ಅವಧೂತ ಶ್ರೀ ಗುರು ದೊಡ್ಡ್ ಲಾಲ್ ಶರಣರ ಭಕ್ತರ ಅಭಿಮಾನ ನಂಬಿಕೆಯ ಕಟ್ಟೆ ಇದ್ದು ಧಾರ್ಮಿಕವಾಗಿ ಹಲವು ಕಾರಣಗಳಿಂದ ಅದರದ್ದೇ ವಿಶೇಷತೆಗಳಿವೆ.

ಭಕ್ತಿಯಿಂದ ಶ್ರೀ ಗುರು ದೊಡ್ಡ ಲಾಲ್ ಸಾಬ್ ಅಜ್ಜ ಎಂದರೆ ಕರೆದಲ್ಲಿಗೆ ಬರುವರು. ಬಂದು ನನ್ನ ನೋವು, ಚಿಂತೆ, ಸಂತಾಪಗಳೆಲ್ಲವನ್ನು ಕಳೆಯುವರು.

ಮನದಭೀಷ್ಟೆಯನ್ನು ಪೂರೈಸುವ ಕರುಣಾಸಮುದ್ರವಾದ,ಪವಾಡ ಪುರುಷ ನಮ್ಮ ಶ್ರೀ ಗುರು ದೊಡ್ಡ ಲಾಲ್ ಸಾಹೇಬರು.

ಹರ ಮುನಿದರೆ ಗುರು ತಾನು ಒಲಿದ,ಗುರು ಮುನಿದರೆ ಹರ ತಾನಂದೆಂದಿಗು ಒಲಿಯನು ಒಂದು ದಾಸರು ಹೇಳುವ ಹಾಗೆ ಭಗವಂತ ನಮ್ಮ ಜೊತೆ ಮುನಿಸಿಕೊಂಡಾಗ ಗುರುಗಳು ಶಿಷ್ಯ– ವಾತ್ಸಲ್ಯದಿಂದ ನಮ್ಮ



ಮೇಲೆ ಪ್ರೀತಿಯನ್ನು ತೆ–ೂರುತ್ತಾರೆ. ಭಗವಂತ ಕೈಬಿಟ್ಟರೂ ಗುರುಗಳು ಕೈಬಿಡುವುದಿಲ್ಲ, ಆದರೆ ಅಪ್ಪಿದಪ್ಪಿ ಗುರುಗಳೇನಾದರೂ ನಮ್ಮಿಂದ ನೋಂದುಕೊಂಡರೆ, ಕೋಪಗೊಂಡರೆ ಆ ಭಗವಂತ ಎಂದೆಂದಿಗೂ ನಮ್ಮ ತಪ್ಪನ್ನು ಮನ್ನಿಸುವುದಿಲ್ಲ ಈ ಜಗತ್ತಿನಲ್ಲಿ ನಮ್ಮನ್ನು ಜನರು ಎಷ್ಟೇ ನಿಶ್ಯಸ್ತವಾಗಿ ನೋಡಿದರೂ,ಎಷ್ಟೇ ಕೀಳಿರಿಮೆಯಿಂದ ಕಂಡರೂ ನಾವೆ ಕೆಳಮಟ್ಟದಲ್ಲಿದ್ದರೂ,ಹೀನಾಯ ಸ್ಥಿತಿಯಲ್ಲಿದ್ದರೂ, ಯಾರಿಗೂ ನಾವು ಬೇಡವಾಗಿದ್ದರೂ,ತಾಯಿ ತನ್ನ ಕಂದನನ್ನು ಬಿಗಿದಪ್ಪಿ ಸಲಗುವಂತೆ, ಗುರುಗಳು ನಮ್ಮ ಕೈಹಿಡಿದು ನಡೆಸುತ್ತಾರೆ. ಗುರುಗಳು ಯಾವತ್ತೂ ನಮ್ಮನ್ನು ಕೈಬಿಡುವುದೇ ಇಲ್ಲ,ಧನವನೆಯ ಬೆಳಕಾಗಿ ನಮ್ಮೊಂದಿಗಿರುತ್ತಾನೆ 'ಗುರುಗಳಿಂತರಿಕ ಇನ್ನಾರು ಅವರು ನಮಗೆ ಗುರುಗಳ ಪರಮ ಹಿತಕರು ನೋಡೋ ಎನ್ನುವ ಎಲ್ಲರನ್ನೂ ಅತ್ಯಂತ ಪ್ರೀತಿಯಿಂದ ಸಲಹುವ ಪರರು ಗುರುಗಳು ಕುಂಬಳವತಿ ದೊಡ್ಡ ಲಾಲ್ ಸಾಬ್ ಶರಣರು.

ಧರ್ಮ ಮಾರ್ಗ ಮೀರಿ ಬದುಕು ಸಾಗಿದಾಗ ಸಾಮಾಜಿಕ ಬದುಕಿನ ಅಭದ್ರತೆಯನ್ನು ನಿವಾರಿಸಲು ದುಷ್ಟಶಕ್ತಿಯನ್ನು ದೂರಿಕರಿಸಲು ಭಗವಂತ ಆಗಾಗ್ಗೆ ಅವತಾರ ತಾಳುತ್ತಾನೇ. ಅನೇಕ ಅವತಾರಗಳನ್ನು ತಳೆದಿದ್ದರೂ ಕುಂಬಳಾವತಿ ಗುರು ಅವತಾರ ಕೂಡ ಶಕ್ತಿಶಾಲಿಯಾದದ್ದು.

ಕುಂಬಳಾವತಿಯ ಶ್ರೀ ಗುರು ದೊಡ್ಡ ಲಾಲ್ ಸಾಬ್ ಶರಣರ ಪವಿತ್ರ ಊರುಸು ಎಪ್ರಿಲ್ 19 ರಂದು ನಡೆಯುತ್ತದೆ. ಯಾವ ಭಕ್ತ ಶುದ್ಧ ಮನಸಿಟ್ಟು ಅಜ್ಜನ ಸೇವೆ ಮಾಡುತ್ತಾನೆ ಅವರ ಬೆನ್ನ ಹಿಂದೆ ನಿಂತು ಅವರ ಬಾಳನ್ನು ನಗುವಿನ ಜೀವನವನ್ನಾಗಿ ಮಾಡುತ್ತಾರೆ.

ಕುಂಬಳವತಿ ಕ್ಷೇತ್ರದ ಶ್ರೀ ಗುರು ದೊಡ್ಡ ಲಾಲ್ ಸಾಬ್ ಶರಣರ ಪವಾಡ ಸಾಕಷ್ಟು. ಮಾನವನ ಜೀವನದೊಳಗೆ ಒಮ್ಮೆಯಾದರೂ ಹೋಗಿ ನೋಡಿ ಜನ್ಮವೇ ಪಾವನವಾಗುತ್ತದೆ. ಸುತ್ತ ಕುಷ್ಟಗಿ ತಾಲ್ಲೂಕಿನಲ್ಲಿ ವಾಹಿನಿ. ಅಜ್ಜನ ಜಾತ್ರೆ ನೋಡಲು ಸಾಲೋದಿಲ್ಲ ಕಣ್ಣು. ಪ್ರತಿ ಗುರುವಾರ ಮತ್ತು ಅಮವಾಸೆ ದಿನ ಅಜ್ಜ ಗದ್ದಿಗೆ ಹಾಕಿ ಬಂದ ಭಕ್ತರ ಬಾಳಿಗೆ ವರ ನೀಡುತ್ತಾರೆ. ಭಕ್ತರಿಗೆ ಬೇಡಿದ್ದು ನೀಡುವ ಗುರುರಾಯ. ನೊಂದು ಬೆಂದು ಬಳಲಿದ ಭಕ್ತರಿಗೆ ಸದಾ ಅವರ ಬೆನ್ನು ಹತ್ಯಾನ. ಅಜ್ಜನ ಗದ್ದುಗೆಯಲ್ಲಿ ಅರುವಿಲ್ಲದೆ ದುಡಿದರೆ ಏನೇನು ಕಡಿಮೆ ಮಾಡೋದಿಲ್ಲ.

ದೊಡ್ಡ ಲಾಲ್ ಸಾಬ್ ಭಕ್ತರ ಮನದಾಗ ಮುತ್ಯಾ ಯಾವತ್ತು ಇರುತ್ತಾನ. ದ್ಯಾಮಣ್ಣ ಮುತ್ಯಾನ ಬಾಯಿಂದ ಸತ್ಯದ ವಾಣಿ ಗುರು ನುಡಿಸುತ್ತಾನ. ಯಾವ ಭಕ್ತರ ನಿಷ್ಠೆಯಿಂದ ದುಡಿಯುತ್ತಾನೆ ಅವರ ಕಷ್ಟ ಕಳಿಯುತ್ತಾನೆ.

ಕುಂಬಳಾವತಿ ಗ್ರಾಮದಲ್ಲಿ ಪುರುಷ ಶ್ರೀ ಗುರು ದೊಡ್ಡ ಲಾಲ್ ಸಾಬ್ ಅಜ್ಜನವರು ನೆಲೆಸಿದ್ದು. ಶ್ರೀ ದ್ಯಾಮಣ್ಣ ಮುತ್ಯಾ ಪ್ರತಿ ಗುರುವಾರ ಬಂದ ಭಕ್ತರ ಸಮಸ್ಯೆಗಳನ್ನು ಈಡೇರಿಸಿ ಬಯಲು ಸೀಮೆಯ ದೈವನಾಗಿ ಭಕ್ತರ ಬೆನ್ನ ಹಿಂದೆ ನಿಂತು ಅವರನ್ನ ಕಾಪಾಡುತ್ತಿದ್ದಾರೆ. ಪ್ರತಿ ಗುರುವಾರ ಮತ್ತು ಅಮಾವಾಸ್ಯೆ ದಿನ ಪುಣ್ಯಭೂಮಿ ಕುಂಬಳಾವತಿ ಗ್ರಾಮಕ್ಕೆ ನೂರಾರು ಭಕ್ತರು

## ಮೋಟಾರ್ ಸೈಕಲ್‌ಗಳ ಮಾಲೀಕರ ಪತ್ತೆಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮಾ.05 – ಇಲ್ಲಿನ ಸದರ ಬಜಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜಪ್ತಿ ಮಾಡಲಾದ ಮೋಟಾರ್ ಸೈಕಲ್‌ಗಳನ್ನು ವಿಲೇವಾರಿ ಮಾಡುತಿದ್ದು, ಈ ವಾಹನಗಳ ಮಾಲಕರು ಪತ್ತೆಯಾದಲ್ಲಿ ರಾಯಚೂರಿನ ಪೊಲೀಸ್ ನಿರೀಕ್ಷಕರು ಸದರ ಬಜಾರ್ ಪೊಲೀಸ್ ಠಾಣೆ ಅವರ ಮೊಬೈಲ್ ನಂ:9480803830,ದೂರವಾಣಿ ಸಂಖ್ಯೆ: 08532–226148ಗೆ ಸಂಪರ್ಕ ಮಾಡಬಹುದಾಗಿದೆ.

ದ್ವಿಚಕ್ರ ವಾಹನಗಳ ನಂಬರ್ ಪ್ಲೆಟ್, ಚೆಸ್ಸಿ ನಂಬರ್, ಎಂಜೀನ್ ನಂಬರ್‌ಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಈ ವಾಹನಗಳ ವಾರಸುದಾರರು ಯಾರೆಂದು ಇದುವರೆಗೆ ಪತ್ತೆಯಾಗಿರುವುದಿಲ್ಲ. ಈ ಕುರಿತು 2024ರ ಆಗಸ್ಟ್ 8ರಂದು ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮಿಸಿಲೆನ್ಸ್ ನಂ; 01/2024 ಕಲಂ 75 ಕೆ.ಪಿ.ಆ್ಯಕ್ಟ್‌ನೇದ್ದರಲ್ಲಿ ನೋಂದಾಯಿಸಿಕೊಳ್ಳಲಾಗಿದೆ.

ಎ.ಪಿ–13/ಎಂ–5448 ಹೊಂಡಾ ಶೈನ್, ಕೆ.ಎ–36/ಯು–7886 ಡಿಸ್ಕವರಿ, ಕೆ.ಎ–36/ಆರ್–1855 ಸ್ಟೇಂಡರ್ ಪ್ಲೇಸ್, ಕೆಎ–36/ಇ.ಎ–9273 ಡಿಸ್ಕವರಿ, ಕೆ.ಎ–36/ಎಫ್–4435 ಸ್ಟೇಂಡರ್ ಪ್ಲೇಸ್, ನಂಬರ್ ಪ್ಲೇಟ್ ಇಲ್ಲದ ಮಹಿಂದ್ರಾ ಮೆಸ್ಟ್ರೋ, ಕೆ.ಎ.36/ಹೆಚ್–5274, ಹಿರೋ ಹೋಂಡಾ ಸ್ಟೆಂಡರ್ ಪ್ಲಸ್, ಕೆ.ಎ–36/ಕ್ಯೂ–2260 ಸ್ಟೇಂಡರ್ ಪ್ಲೇಸ್ ವಾಹನಗಳ ಮಾಲೀಕರು ಪತ್ತೆಯಾಗಿರುವುದಿಲ್ಲ ಎಂದು ಸದರ ಪೊಲೀಸ್ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿಎಸ್ಎಸ್ ಪದಾಧಿಕಾರಿಗಳ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.5-ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ ವಾದ) ವತಿಯಿಂದ ನೂತನ ಜಿಲ್ಲಾ, ತಾಲೂಕು ಹಾಗೂ ನಗರ ಘಟಕಗಳ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ನವನಗರದ ನಗರದ ಸಂ-ಜಯ್ ಹೋಟೆಲ್‌ನಲ್ಲಿ ಜಿಲ್ಲಾ ಪ್ರಧಾನ ಸಂಚಾಲಕ ಯುವರಾಜ ಬಂಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬೆಳಗಾವಿ ವಿಭಾಗೀಯ ಸಂಚಾಲಕ ಸಂಜಯ ಕಂಬಾಗಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿದರು. ವಿಭಾಗೀಯ ಸಂಘಟನಾ ಸಂಚಾಲಕ ಸಂಗಮೇಶ ಕಾಂಬ್ಳೆ ಇದ್ದರು.

ಜಿಲ್ಲಾ ಸಂಘಟನಾ ಸಂಚಾಲಕರಾಗಿ ಸುರೇಶ ನಂದಿ, ರವಿ ಅಬ್ಬಿಗೇರಿ, ಬಸವರಾಜ ನೀಲನಾಯಕ, ಹಣಮಂತ ಯಡಹಳ್ಳಿ, ಸಂಜು ಮರಿಕಟ್ಟಿ, ಇಬ್ರಾಹಿಂ ನಾಯಕ್, ಗುರುರಾಜ್ ಕರೀಶೆಟ್ಟಿ, ಶಿವಕುಮಾರ ಮಡ್ಡಿ ಆಯ್ಕೆಯಾದರು.

ಸದಸ್ಯರಾಗಿ ಗಾಜಿಯಗೋಳ, ಅರ್ಜುನ್ ಲಮಾಣಿ, ಶ್ರೀಕಾಂತ್ ದೊಡಮನಿ, ತಾಲೂಕು ಸಂಚಾಲಕರರಾಗಿ ಯಲ್ಲಪ್ಪ ಕಡೆಮನಿ, ಸಂಘಟನಾ ಸಂಚಾಲಕರಾಗಿ ಚಿದಾನಂದ ಹೊಸಮನಿ, ಗ್ಯಾನಪ್ಪ ಚಲವಾದಿ, ಬಸವರಾಜ ದಂಡಿನವರ, ಭೀಮಶಿ ಮಾದರ, ಶೇಕಪ್ಪ ಮಾದರ, ಕುಮಾರ ಹಂಚಿನಾಳ, ಪ್ರಕಾಶ ಎಲ್ ಡಬ್ಲ್ಯೂ, ಸಮೀರ್ ಗಲಗಲಿ ಆಯ್ಕೆಯಾದರು.

ನಗರ ಘಟಕದ ಸಂಚಾಲಕರಾಗಿ ಮಹದೇವ ನಾಯಕ್, ಸಂಘಟನಾ ಸಂಚಾಲಕರಾಗಿ ನಿತಿನ್ ಹೊಸಮನಿ, ಮುನ್ನಾ, ಮಹಲಿಂಗ ವಡ್ಡರ, ಕಲೀಂ ರೋಣ, ಅಬ್ದುಲ್ ರೆಹಮಾನ್ ನದಾಫ ಅವರನ್ನು ಆಯ್ಕೆ ಮಾಡಲಾಯಿತು.

### ಬಾಗಲಕೋಟೆಯಲ್ಲಿ ಆರ್‌ಎಸ್‌ಎಸ್ ಕಾರ್ಯಾಲಯ ಉದ್ಘಾಟನೆ

# ಸಾಮಾಜಿಕ ಸಾಮರಸ್ಯ ಆರ್‌ಎಸ್‌ಎಸ್ ಆಶಯ-ಮಂಗೇಶ ಭೇಂಡೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.5-ಸಕಲ ಹಿಂದೂ ಸಮಾಜವನ್ನು ಒಗ್ಗೂಡಿಸಿ ರಾಷ್ಟ್ರೀಯತೆಯ ಭಾವನೆ, ಸರ್ವರಲ್ಲೂ ಏಕತೆ ಮೂಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಶತಮಾನದಿಂದ ಶ್ರಮಿಸುತ್ತಿದೆ. ಜಾತಿ, ಮತ, ಬೇಧ ಮರೆತು ಎಲ್ಲರೂ ಒಂದಾಗಬೇಕು. ಸಮಾಜದಲ್ಲಿ ಸಾಮರಸ್ಯ ಮೂಡಬೇಕು ಎಂಬ ಆಶಯ ಹೊಂದಿದೆ ಎಂದು ನಾಗಪುರದ ರಾಷ್ಟ್ರೀಯ ಸ್ವ-ಯಂ ಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಹೇಳಿದರು.

ಸೇವಾ ಭಾರತಿ ಟ್ರಸ್ಟ್ ಬಾಗಲಕೋಟೆ ಶಾಖೆ ಅಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಆಶ್ರಯಧಾಮ ಹಾಗೂ ಸಂಘದ ನೂತನ ಕಟ್ಟಡ 'ಸಂಘಮಿತ್ರ' ಕಾರ್ಯಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್ ಜಗತ್ತಿನ ಅತೀ ದೊಡ್ಡ ಸಂಘಟನೆಯಾಗಿ ಬೆಳೆದಿದೆ. ಸ್ವಾತಂತ್ರ್ಯ ಪೂರ್ವ ಹಾಗೂ ನಂತರದ ದಿನಗಳಲ್ಲಿ ಅನೇಕ ಸವಾಲು, ಸಂಕಷ್ಟ ಎದುರಿಸಿ ಗಟ್ಟಿಯಾಗಿ ನಿಂತು ತನ್ನ ಕಾರ್ಯಚಟುವಟಿಕೆ ವಿಸ್ತರಿಸುತ್ತ ಸಾಗುತ್ತಿದೆ ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉದ್ದೇಶ ಅಸ್ಪೃಶ್ಯತೆ ಹೋಗಲಾಡಿಸುವುದು, ಸಾಮಾಜಿಕ ಸಾಮರಸ್ಯ ಕಾಪಾಡುವುದು, ದೇಶಾಭಿಮಾನ ಹೆಚ್ಚಿಸುವುದು, ಧರ್ಮ ರಕ್ಷಣೆ ಮಾಡುವುದಾಗಿದೆ. ಕೇವಲ ಪ್ರಚಾರಕರು ಬಂದಾಗ ಈ ಕಾರ್ಯವಾಗಬಾರದು. ನಮ್ಮ ದೈನಂದಿನ ಬದುಕಿನ ಮೂಲ ಉದ್ದೇಶವಾಗಿರಬೇಕು ಎಂದು ಸಲಹೆ ನೀಡಿದ ಭೇಂಡೆ, ಸಂಘ ಕ್ರಿಶ್ಚಿಯನ್, ಮುಸ್ಲಿಂ ವಿರೋಧಿ ಅಲ್ಲ. ಕೇವಲ ಹಿಂದುಗಳ ರಕ್ಷಣೆ, ಧರ್ಮ ರಕ್ಷಣೆ, ಸೇವಾ ಮನೋಭಾವನೆ ಹೊಂದಿದೆ. ಯಾವುದನ್ನು ವಿರೋಧಿಸುವಕ್ಕೆ ಸಂಘ ಹುಟ್ಟಿಲ್ಲ. ಈ ನೆಲದ ಗಟ್ಟಿತನ ಉಳಿಸಲು ಸೇವೆ ಮಾಡುತ್ತಿದೆ ಎಂದರು.

ಬಾಗಲಕೋಟೆಯ ಅಡತ ಬಜಾರನಲ್ಲಿ ಸಣ್ಣದಾಗಿ ಸಂಘದ ಕಾರ್ಯಾಲಯ ಆರಂಭವಾಯಿತು. ದಶಕಗಳ ಹೋರಾಟ, ಶ್ರಮದ ಫಲವಾಗಿ ಇಂದು ಸ್ವಂತ ಕಟ್ಟಡ ನಿರ್ಮಾಣವಾಗಿ ನಿಂತಿದೆ. ಜ್ಯೋತಿಪ್ರಕಾಶ ಸಾಳುಂಕೆ, ಕಾಶೀನಾಥ ನಾವಲಗಿ, ಶಂಕರ ಮೇಲ್ನಾಡ ಸೇರಿ ಅನೇಕ ಮಹನೀಯರು ಬದುಕು ತ್ಯಾಗ ಮಾಡಿದ್ದಾರೆ. ಸಂಘದ ಕಾರ್ಯಕರ್ತರ ಆಶಯದಂತೆ ಸ್ವಂತ ಕಟ್ಟಡ ನಿರ್ಮಾಣವಾಗಿದೆ. ಇದು ವಿರಾಮ ಸಮಯವಲ್ಲ. ಕಾರ್ಯಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸುವ ಭಾವನೆ ಹೆಚ್ಚಾಗಬೇಕು ಎಂದು ಅವರು ಹೇಳಿದರು.

ಚರಂತಿಮಠದ ಪ್ರಭು ಸ್ವಾಮೀಜಿ ಮಾತನಾಡಿ, ಸಂಘ ಬಹಳಷ್ಟು ಕಷ್ಟ, ನೋವು ನೋಡಿಕೊಂಡು ಬಂದಿದೆ. ಈ ನಗರಕ್ಕೆ ನಾನು ಆಗಮಿಸಿದಾಗ ಸ್ವಯಂ ಸೇವಕರ ಸೇವೆ ನೋಡಿ ಸಂತಸ ಉಂಟಾಯಿತು. ಪ್ರತಿಯೊಬ್ಬರೂ ಮಕ್ಕಳಿಗೆ ಸಂಸ್ಕಾರ ಹೇಳಿ ಕೊಡಬೇಕು. ಯಾವುದೇ ಕಾರಣಕ್ಕೂ ದಾರಿ ತಪ್ಪದಂತೆ ಜಾಗೃತಿ ವಹಿಸಬೇಕು ಎಂದು ಹೇಳಿದರು.

ಗುಳೇದಗುಡ್ಡದ ನೀಲಕಂಠೇಶ್ವರ ಶಿವಚಾರ್ಯ ಸ್ವಾಮೀಜಿ, ಹಂಸನೂರಿನ ಶಿವಾನಂದ ಮಠದ ಅಭಿನವ ಬಸವರಾಜೇಂದ್ರ ಸ್ವಾಮೀಜಿ, ಆಳಂದದ ಶ್ರೀಶ್ರೈಲ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಂಘದ ಪ್ರಮುಖರಾದ ಬಸವರಾಜ ಡಂಬಳ, ರಘು ಅರಮಂಚಿ, ಚಿದಾನಂದ ಕರಮಾಕರ, ಡಾ.ಸುಭಾಸ ಪಾಟೀಲ, ಚಂದ್ರಶೇಖರ ದೊಡ್ಡಮನಿ ವೇದಿಕೆ ಮೇಲೆ ಇದ್ದರು. ಕಾರ್ಯಕ್ರಮದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯ ಸಭಾ ಸದಸ್ಯ ನಾರಾ ಯಣಸಾ ಭಾಂಡಗೆ, ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ, ದೊಡ್ಡನಗೌಡ ಪಾಟೀಲ, ಅರುಣ ಶಹಾಪೂರ, ರಾಜಶೇಖರ ಶೀಲವಂತ, ಅರವಿಂದ ಲಿಂಬಾವಳಿ, ಎಂ.ಕೆ.ಪಟ್ಟಣಶೆಟ್ಟಿ, ಡಾ.ಸಿ.ಎಸ್.ಪಾಟೀಲ, ಗುಂಡೂರಾವ ಶಿಂಧೆ ಇದ್ದರು.

## ಜಯ ಕರ್ನಾಟಕ ರಾಜ್ಯಾಧ್ಯಕ್ಷರ ಜನ್ಮದಿನದ ಅಂಗವಾಗಿ ಶಾಲೆ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಸೇಡಂ, ಮಾ, 05. ಜಯ ಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷರಾದ ಬಿ.ಎನ್.ಜಗದೀಶ ಅವರ ಜನ್ಮದಿನದ ನಿಮಿತ್ಯ ಸೇಡಂ ನಗರದ ದಾನಮ್ಮ ದೇವಿ ದೇವಸ್ಥಾನ ದಲ್ಲಿ ವಿಶೇಷ ಪೂಜೆ ಮಾಡಲಾಯಿತು.

ನಂತರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನೀಲಹಳ್ಳಿಯಲ್ಲಿ ತಾಲೂಕ ಅಧ್ಯಕ್ಷರಾದ ರವೀಂದ್ರ ನಾಯಕ ಅವರ ನೇತೃತ್ವದಲ್ಲಿ ಶಾಲಾ ಮಕ್ಕಳಿಗೆ ನೋಟಬುಕ್ ಹಾಗೂ ಪೆನ್ ಗಳನ್ನು ವಿತರಣೆ ಮಾಡಿ .ಶಾಲೆಯ ಶಿಕ್ಷಕ ವೃಂದದವರಿಗೆ ಶಾಲು ಹೊದಿಸಿ ನೇಮಪಿನಕಾಣಿಕೆ ನೀಡಿ ಗೌರವಿಸಲಾಯಿತು

ಈ ಸಂದರ್ಭದಲ್ಲಿ ಶಾಲೆಯ ಎಸ್. ಡಿ. ಎಮ್. ಸಿ. ಅಧ್ಯಕ್ಷ ಹಾಗೂ ಸಂಘಟನೆಯ ಕಾರ್ಯಕರ್ತರು ಪದಾಧಿಕಾರಿಗಳು. ಅನ್ನದಾತರು ,ಗ್ರಾಮಸ್ಥರು ಇನ್ನಿತರರು ಇದ್ದರು.

# ರಾಷ್ಟ್ರೀಯ ಆರೋಗ್ಯ ಅಭಿಯಾನ-ಮಾಧ್ಯಮದವರಿಗೆ ಕಾರ್ಯಾಗಾರ ಯೋಜನೆಗಳ ಲಾಭ ಜನರಿಗೆ ತಲುಪಿಸುವಲ್ಲಿ ಮಾಧ್ಯಮದ ಪಾತ್ರ ಮುಖ್ಯ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.5-ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಗಳನ್ನು ಜನರಿಗೆ ತಲುಪಿಸುವ ಕಾರ್ಯದಲ್ಲಿ ಮಾಧ್ಯಮದ ಪಾತ್ರ ಮಹತ್ವದ್ದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಐಇಸಿ ವಿಭಾಗದ ಸಹಯೋಗದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಗಳ ಕುರಿತು ಮಾಧ್ಯಮದವರಿಗೆ ಹಮ್ಮಿಕೊಂಡ ಕಾರ್ಯಾಗಾರದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಆರೋಗ್ಯ ಇಲಾಖೆಯ ಕಾರ್ಯಕ್ರಮಗಳನ್ನು ಐಇಸಿ ಚಟುವಟಿಕೆಗಳ ಮೂಲಕ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಅನುಷ್ಠಾನದಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖವಾಗಿದೆ ಎಂದರು.

ಹೃದಯ ಸಂಬಂಧಿತ ಕಾಯಿಲೆಗಳಿಗೆ ಬಾಗಲಕೋಟೆ ಜಿಲ್ಲಾ ಆಸ್ಪತ್ರೆ, ಹುನಗುಂದ ಮತ್ತು ಮುಧೋಳ ಆಸ್ಪತ್ರೆಗಳಲ್ಲಿ ವಿಭಾಗ ಕಲ್ಪಿಸಲಾಗಿದೆ. ಈ ವಿಭಾಗದಲ್ಲಿ ಚಿಕಿತ್ಸೆ ವಯಸ್ಸಿಗೆ ಅನುಗುಣವಾಗಿ ನೀಡಲಾಗುತ್ತದೆ. ಅಲ್ಲದೇ ಹೃದಯಾಘಾತ ಸಂಭವಿಸಿದಾಗ ಒಂದು ಗಂಟೆಯೊಳಗೆ ದುಬಾರಿ ಇಂಜೆಕ್ಷನ್ ನೀಡುವ ಸೌಲಭ್ಯ ಕೂಡಾ ಇದೆ. ಇದರ ಜೊತೆಗೆ ಜೀವಿತಾವಧಿ ಮುನ್ನ ಸಾವಾಗುವಂತದ್ದು, ಬೇರೆ ಬೇರೆ ರೋಗಗಳು ಮತ್ತು ಅಂಗವಿಕಲತೆ ತಡೆಗಟ್ಟುವ ಕೆಲಸ ಮಾಡಲಾಗುತ್ತಿದೆ ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗವೇಣಿ, ತಾಯಿ ಮತ್ತು ಮಗುವಿನ ಆರೋಗ್ಯ, ಡಾ.ಅಜಿತ ಅಸಾಂಕ್ರಾಮಿಕ ರೋಗಗಳಾದ ಕ್ಯಾನ್ಸರ್, ಹೃದಯ ಸಂಬಂಧಿತ ಕಾಯಿಲೆ, ಬಿಪಿ, ಶುಗರ್ಸ್ ಕಾಯಿಲೆ ಕುರಿತು ಹಾಗೂ ಕೀಟಜನ್ಯದಿಂದ ಸಂಭವಿಸುವ ರೋಗಗಳ ಬಗ್ಗೆ ಹಿರಿಯ ಪ್ರಯೋಗ ಶಾಲಾ ತಂತ್ರಜ್ಞ ಅಧಿಕಾರಿ ಅಶೋಕ ನೀಲವಾಣಿ ಉಪನ್ಯಾಸ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ಧಲಬಂಜನ ಮಾತನಾಡಿ, ಪ್ರತಿದಿನ ಸುದ್ದಿಯ ಜಂಜಾಟದಲ್ಲಿ ಇರುವ ಪತ್ರಕರ್ತರಿಗೆ ಆರೋಗ್ಯ ಶಿಬಿರ ಏರ್ಪಡಿಸುವಂತೆ ಮನವಿ ಮಾಡಿಕೊಂಡರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಕಸ್ತೂರಿ ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮ ಅಧಿಕಾರಿ ಶಿವನಗೌಡ ಪಾಟೀಲ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ದಯಾನಂದ ಕರೆನ್ನವರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಶಿಕಲಾ ಶಿನ್ನೂರ, ಆರೋಗ್ಯ ಇಲಾಖೆಯ ಶಶಿಕುಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು. ಏಡ್ಸ್ ಪ್ರತಿಬಂಧಕ ವಿಭಾಗದ ಸುಬೇದಾರ ವಂದಿಸಿದರು.

## ಬಾಗಲಕೋಟೆಯಲ್ಲಿ ಮಾ. 14 ರಿಂದ 16 ರವರೆಗೆ ಬಣ್ಣದೋಕುಳಿ ಶಾಂತಿ, ಸಂಭ್ರಮದಿಂದ ಹೋಳಿ ಹಬ್ಬ ಆಚರಿಸಿ : ಡಿಸಿ ಜಾನಕಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.5-ಪ್ರತಿವರ್ಷದಂತೆ ಈ ವರ್ಷವೂ ಜಿಲ್ಲೆಯಲ್ಲಿ ಮಾರ್ಚ 14 ರಿಂದ 16 ವರೆಗೆ ನಡೆಯಲಿರುವ ಹೋಳಿ ಸಂಭ್ರಮದ ಗತವೈಭವ ಮರುಕಳುಹಿಸುವ ನಿಟ್ಟಿನಲ್ಲಿ ಹೋಳಿ ಹಬ್ಬವನ್ನು ಶಾಂತಿ ಹಾಗೂ ಸಂಭ್ರಮದಿಂದ ಆಚರಿಸುವಂತೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಸಂಜೆ ಹೋಳಿ ಹಬ್ಬ ಆಚರಣೆ ಸಂಬಂಧ ಜರುಗಿದ ಶಾಂತತಾ ಸಭೆಯ ಅದ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಬ್ಬಗಳು ಇರುವುದು ಸಂಭ್ರಮಾಚರಣೆಗಾಗಿ. ಆದ್ದರಿಂದ ದೇಶದಲ್ಲಿಯೇ 2ನೇ ಸ್ಥಾನ ಪಡೆದಿರುವ ಬಾಗಲಕೋಟೆ ಹೋಳಿ ಹಬ್ಬ ಶಿಸ್ತಿನಿಂದ ಅಚ್ಚುಕಟ್ಟಾಗಿ ನಡೆಯಬೇಕಿದೆ. ನಗರದ ಅನೇಕ ಸಂಘಟನೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸ್ವತಃ ಸ್ವಯಂ ಸೇವಕರಾಗಿ ಕೆಲಸ ಮಾಡಿ ಶಾಂತಿ ಕಾಪಾಡುವ ಜೊತೆಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ಜೊತೆ ಸಹಕರಿಸಬೇಕು ಎಂದರು.

ಅದೆಷ್ಟೋ ಸಂಭ್ರಮದಿಂದ ಹಬ್ಬ ಆಚರಿಸಿದರೂ ಖುಷಿ ಪಡೆಯದೇ ಸಣ್ಣದೊಂದು ಘಟನೆಯನ್ನು ದೊಡ್ಡದನ್ನಾಗಿ ಬಿಂಬಿಸುವ ಕಾರ್ಯವಾಗಬಾರದು. ಸಂತೋಷದಿಂದ ಪರಸ್ಪರ ಸೌಹಾರ್ದತೆಯಿಂದ ಹೋಳಿ ಹಬ್ಬ ಆಚರಿಸುವಂತೆ ಹೋಳಿ ಸಮಿತಿಗೆ ಕರೆ ನೀಡಿದರಲ್ಲದೇ, ಈ ಸಮಯದಲ್ಲಿ ಪಿಯುಸಿ ಪರೀಕ್ಷೆಗಳು ನಡೆಯುತ್ತಿರುವುದರಿಂದ ಪರೀಕ್ಷಾರ್ಥಿಗಳಿಗೆ ತೊಂದರೆ-ಯಾಗದಂತೆ ಹೋಳಿ ಸಮಿತಿಯವರು ನಿಗಾವಹಿಸಬೇಕು. ಆಚರಣೆಯಲ್ಲಿ ಸಮಸ್ಯೆ ಉಂಟಾದಲ್ಲಿ ನೇರವಾಗಿ ಪೊಲೀಸ್ ಇಲಾಖೆಗೆ ಸಂಪರ್ಕಿಸಬೇಕು. ಹೋಳಿ ಆಚರಣೆಗೆ ಬಿಡುಗಡೆ-ಯಾದ ಅನುದಾನ ಮರಳಿ ತರಲು ಕ್ರಮವಹಿಸುವುದಾಗಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಮಾತನಾಡಿ, ಹಬ್ಬಗಳೆಂದರೆ ಸಂಭ್ರಮಿಸುವುದು ಸಹಜ. ಆದರೆ ಸಂಭ್ರಮಾಚರಣೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗೆ ಅವಕಾಶ ಕೊಡಬಾರದು. ಹಬ್ಬದ ಆಚರಣೆಗೆ ಪೊಲೀಸ್ ಇಲಾಖೆ ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದೆ. ಹಲಗೆ ಮೇಳ ಸ್ಪರ್ಧೆಗಳು ನಡೆಯುವ ಸ್ಥಳಗಳ ಮಾಹಿತಿ ನೀಡಿದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಿಕೊಡಲಾಗುವುದು. ಹಬ್ಬದ ಬಂದೋಬಸ್ತಗಾಗಿ ಹೊರಗಡೆಯಿಂದ ಬಂದ ಪೊಲೀಸ್ ಸಿಬ್ಬಂದಿಗಳಿಗೆ ಸ್ಥಳೀಯ ನಾಯಕರು, ಸಂಘಟಿಕರ ಪರಿಚಯವಿರುವದಿಲ್ಲ. ಅಂತಹ ಸಿಬ್ಬಂದಿಗಳೊಂದಿಗೆ ಸಹಕರಿಸಿಕೊಂಡು ಹಬ್ಬದ ಯಶಸ್ವಿಗೆ ಸಹಕರಿಸಲು ತಿಳಿಸಿದರು.

ಹೋಳಿ ಸಮಿತಿಯ ಪ್ರತಿನಿಧಿ ಮಹಾಬಳೇಶ ಗುಡಗುಂಟಿ ಮಾತನಾಡಿ, ಮಾರ್ಚ 12 ರಿಂದ ಹೋಳಿ ಹಬ್ಬ ಪ್ರಾರಂಭಗೊಳ್ಳುತ್ತಿದ್ದು, ಮಾರ್ಚ 13 ರಂದು ಕಾಮದಹನವಾಗುತ್ತದೆ. ಮಾರ್ಚ 14 ರಿಂದ 16 ವರೆಗೆ ಮೂರು ದಿನಗಳ ಕಾಲ ಬಣ್ಣದೋಕುಳಿ ಜರುಗಲಿದೆ. 14 ರಂದು ಕಿಲ್ಲಾ, ನವನಗರ ಹಾಗೂ ವಿದ್ಯಾಗಿರಿ, 15 ರಂದು ಹಳಪೇಟೆ, ಜೈನ ಪೇಟೆ ಹಾಗೂ ವೆಂಕಟಪೇಟೆ, 16 ರಂದು ಹೊಸಪೇಟೆ ಓಣಿಯಲ್ಲಿ ಬಣ್ಣದೋಕುಳಿ ನಡೆಯಲಿದೆ ಎಂದರು.

ಇದರ ಜೊತೆಗೆ ಸೋಗಿನ ಬಂಡಿ ಮೆರವಣಿಗೆ ಕೂಡಾ ಜರುಗಲಿದ್ದು, 13 ಕಿಲ್ಲಾ, 14 ಹಳಪೇಟೆ, 15 ಹೊಸಪೇಟೆ, 16 ಜೈನ ಪೇಟೆ, 17 ವೆಂಕಟಪೇಟೆ ಹಾಗೂ ವಿದ್ಯಾಗಿರಿಯಲ್ಲಿ ನಡೆಯಲಿದೆ. ನಗರದ ಬಸವೇಶ್ವರ ವೃತ್ತದ ಬಳಿ ಇರುವ ಹೊಳೆ ಆಂಜನೇಯ ದೇವಸ್ಥಾನದ ಆವರಣ ಹಾಗೂ ಕಿಲ್ಲಾ ಅಂಬಾಭವಾನಿ ದೇವಸ್ಥಾನದ ಬಳಿ ರೇನ್‌ಡ್ಯಾನ್ಸ್ ನಡೆಯಲಿದೆ ಎಂದು ಹೇಳಿದರಲ್ಲದೇ, ಈ ಹಿಂದೆ ಹೋಳಿ ಆಚರಣೆಗೆ ಜಿಲ್ಲೆಗೆ ನೀಡಲಾದ 10 ಲಕ್ಷ ರೂ.ಗಳ ಅನುದಾನ ಮರಳಿ ಪಡೆಯುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಎ.ಎ.ದಂಡಿಯಾ ಮತ್ತು ಟಂಕಸಾಲಿ ಮಾತನಾಡಿ, ರಂಜಾನ ತಿಂಗಳು ಆರಂಭಗೊಂಡಿದ್ದು, ಇದೇ ಸಮಯದಲ್ಲಿ ಹೋಳಿ ಹಬ್ಬ ಬಂದಿರುವದರಿಂದ ಎರಡು ಹಬ್ಬಗಳನ್ನು ಸಂಭ್ರಮದಿಂದ ಆಚರಿಸಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ಮಾಂತೇಶ ಜಿದ್ದಿ, ಡಿವಾಯ್‌ಎಸ್‌ಪಿ ಬಿರಾದಾರ, ನವನಗರ ಸಿಪಿಐ ಗುರುನಾಥ ಚವ್ಹಾಣ ಸೇರಿದಂತೆ ಹೋಳಿ ಸಮಿತಿಯ ಪ್ರತಿನಿಧಿಗಳಾದ ಕಳಕಪ್ಪ ಬಾದವಾಡಗಿ, ಅಶೋಕ ಲಿಂಬಾವಳಿ, ಸಂಚು ವಾಡಕರ, ನಾಗರಾಜ ಹದ್ಲಿ, ಶ್ರಣವ ಖಾತೇದಾರ, ಬಸವರಾಜ ಧರ್ಮಂತಿ, ಶಿವುಕುಮಾರ ನಂದಿಕೋಳಮಠ, ವಿವೇಕಾನಂದ ಗರಸಂಗಿ ಉಪಸ್ಥಿತರಿದ್ದರು.

# ಕೊಡ್ಲಾ ಶಂಭುಲಿಂಗೇಶ್ವರ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ



ಮಲ್ಲಮ್ಮ ನುಡಿ ವಾರ್ತೆ

ಸೇಡಂ : ಮಾ. 05. ತಾಲೂಕಿನ ಕೊಡ್ಲಾ ಗ್ರಾಮದ ಜ್ಞಾನವಾಹಿನಿ ಪ್ರೌಢಶಾಲೆ ಮತ್ತು ಶ್ರೀ ಶಂಭುಲಿಂಗೇಶ್ವರ ಕಲಾ ಹಾಗೂ ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಜಂಟಿಯಾಗಿ ಹಮ್ಮಿಕೊಂಡ ಹತ್ತನೇ ತರಗತಿಯ ಮತ್ತು ಪಿಯುಸಿ ಮಕ್ಕಳ ಬಿಳ್ಕೊಡುಗೆ ಸಮಾರಂಭವನ್ನು ಶ್ರೀ ಮತಿ ಸುಭದ್ರಮ್ಮ ಮಾಲಿಪಾಟೀಲ ಸ್ವಾಗತಿಸುವ ಮುಕಾಂತರ ಜ್ಯೋತಿ ಪ್ರಜ್ವಲಿಸಿ ಕಾರ್ಯಕ್ರಮವನ್ನು ಆರಂಭಿಸಲಾಯಿತು.

ಈ ಕಾರ್ಯಕ್ರಮಕ್ಕೆ ನೃಪತುಂಗ ಪದವಿ ಮಹಾವಿದ್ಯಾಲಯ ಸೇಡಂನ ಇತಿಹಾಸ ಉಪನ್ಯಾಸಕಿ ಡಾ.ಅಮೃತಾ ರೆಡ್ಡಿ ಮಮ್ಮಾಜಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಯಶಸ್ವಿಯನ್ನು ಪಡೆಯಲು ಗುರಿ ಮತ್ತು ಮಾರ್ಗದ ಜೊತೆಗೆ ಆತ್ಮವಿಶ್ವಾಸ ಅತ್ಯಂತ ಮುಖ್ಯ ಎಂದು ಮಾತನಾಡಿದರು ಗಿಡದಲ್ಲಿರುವ ಒಂದು ಹಣ್ಣನ್ನು ಕಿಳಬೇಕಾದರೆ ಅಲ್ಲಿ ಸುಭದ್ರ ಏಣಿ ಇದ್ದಾಗ ಮಾತ್ರ ಹಣ್ಣು ಕೈಸೇರುತ್ತದೆ ಹಾಗೆ ವಿದ್ಯಾರ್ಥಿಗಳು ಕೂಡ ತಾವು ಅಧ್ಯಯನವನ್ನ ಮಾಡುವಾಗ ಉತ್ತಮ ಗುರಿಯೊಂದಿಗೆ ಸಮರ್ಥ ಅಧ್ಯಯನದ ಮಾರ್ಗವನ್ನು ಕೂಡ ಆಯ್ಕೆ ಮಾಡಿಕೊಳ್ಳಬೇಕೆಂದರು.

ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಶಂಭುಲಿಂಗೇಶ್ವರ ಶಿಕ್ಷಣ ಟ್ರಸ್ಟ್ ನ ಅಧ್ಯಕ್ಷರು ಶಂಭುಲಿಂಗ ರೆಡ್ಡಿ ಮದನಿ ಮಾತನಾಡಿ ಪರೀಕ್ಷೆ ಬರೆಯುವಂತ ಸಂದರ್ಭದಲ್ಲಿ ಆತಂಕ ಮತ್ತು ಭಯದಿಂದ ಹೊರಗೆಬಂದು ಪರೀಕ್ಷೆ ಬರೆಯಿರಿ ಎಂದು ತಿಳಿಸಿದರು.

ಪದವಿಪೂರ್ವ ವಿದ್ಯಾಲಯದ ಪ್ರಾಂಶುಪಾಲರಾದ ಅನಂತ ರೆಡ್ಡಿ ಮುನ್ನೂರು ಅವರು ಪ್ರಸ್ತಾವಿಕ ಮಾತುಗಳನ್ನು ಆಡಿದರು . ಶಿವಲಿಂಗಯ್ಯ ಸ್ವಾಮಿ ಗಚ್ಚಿನಮಠ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಕ್ಕಳಿಗೆ ಶುಭ ಹಾರೈಸಿದರು ಸಾಹೇಬರೆಡ್ಡಿ ದೇವನೂರು ನಿರೂಪಿಸಿ ವಂದಿಸಿದರು.

## ವಿಗಳನ್ನು ಜೀವನದುದ್ದಕ್ಕು ರಕ್ಷಣೆ ಮಾಡಿಕೊಳ್ಳಬೇಕು : ಡಾ. ರವೀಂದ್ರನಾಥ್




ಮಲ್ಲಮ ನುಡಿ ವಾರ್ತೆ

ಕೊಪ್ಪಳ : ಕಿವಿಗಳು ಪ್ರತಿಯೊಬ್ಬ ಮನುಷ್ಯನ ಪಂಚೇಂದ್ರಿಯಗಳಲ್ಲಿ ಪ್ರಮುಖ ಅಂಗವಾಗಿದ್ದು, ಅವುಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದುದ್ದಕ್ಕು ರಕ್ಷಣೆ ಮಾಡಿಕೊಳ್ಳಬೇಕು ಎಂದು ಕೊಪ್ಪಳ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ರವೀಂದ್ರನಾಥ್ ಎಂ.ಹೆಚ್. ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಗಂಗಾವತಿ ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಮತ್ತು ಕನಕಗಿರಿ ಸಮುದಾಯ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಕನಕಗಿರಿ ಪಟ್ಟಣದ ಸಂತೆ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ "ವಿಶ್ವ ಶ್ರವಣ ದಿನಾಚರಣೆ" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ವರ್ಷ ಮಾರ್ಚ್ 3 ರಂದು "ವಿಶ್ವ ಶ್ರವಣ ದಿನ" ಕಾರ್ಯಕ್ರಮ ಆಚರಿಸಲಾಗುತ್ತದೆ. ಈ ಕಾರ್ಯಕ್ರಮದ ಉದ್ದೇಶ ಶ್ರವಣದೋಷ ಮತ್ತು ಕಿವುಡುತನ ತಡೆಗಟ್ಟುವಿಕೆ ಮತ್ತು ನಿಯಂತ್ರಣದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದಾಗಿದೆ. "ಬದಲಾಗುತ್ತಿರುವ ಮನಸ್ಥಿತಿ: ಕಿವಿ ಮತ್ತು ಶ್ರವಣ ಆರೈಕೆಯನ್ನು ಎಲ್ಲರಿಗೂ ವಾಸ್ತವವಾಗಿಸಲು ನಿಮ್ಮನ್ನು ಸಶಕ್ತಗೊಳಿಸಿಕೊಳ್ಳಿ!" ಎಂಬ ಘೋಷವಾಕ್ಯದೊಂದಿಗೆ ಈ ವರ್ಷ ಅರಿವು ಮೂಡಿಸುವ ಕಾರ್ಯಕ್ರಮ ಆಚರಿಸಲಾಗುತ್ತದೆ. ಕಿವಿಯಲ್ಲಿ ಕಡ್ಡಿ ಹಾಕಬಾರದು, ಎಣ್ಣೆ ಹಾಕಬಾರದು, ನಕಲಿ ವೈದ್ಯರ ಕಡೆಯಿಂದ ಕಿವಿಯಲ್ಲಿ ಗುಗ್ಗೆ ತೆಗೆಸಿಕೊಳ್ಳಬಾರದು, ವೈದ್ಯರ ಸಲಹೆ ಇಲ್ಲದೆ ಕಿವಿಯಲ್ಲಿ ಏನು ಹಾಕಬಾರದು, ಕಲುಷಿತ ನೀರಿನಲ್ಲಿ ಈಜಬಾರದು, ಎಂದು ತಿಳಿಸಿದರು.

ಕಿವಿನೋವು, ಸೋರುವಿಕೆ ಕಂಡು ಬಂದರೆ ತಮ್ಮ ಸಮೀಪದ ತಾಲೂಕಾ ಅಥವಾ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಕಿವಿ, ಮೂಗು, ಗಂಟಲು ತಜ್ಞರನ್ನು ಸಂಪರ್ಕಿಸಬೇಕು ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಉಚಿತ ಶ್ರವಣ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುವುದು ಎಂದು ತಿಳಿಸಿದರು. ಕುಟುಂಬ ಕಲ್ಯಾಣ ಕಾರ್ಯಕ್ರಮದ ಕುರಿತು ಮಾತನಾಡುತ್ತಾ, ಮಿತ ಸಂತಾನದಿಂದ ಕುಟುಂಬದ ಅಭಿವೃದ್ಧಿ ಸಾಧ್ಯ ಹಾಗೂ ಕುಟುಂಬ ಕಲ್ಯಾಣ ಯೋಜನೆಗಳಾದ ತಾತ್ಕಾಲಿಕ ಹಾಗೂ ಶಾಶ್ವತ ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಂಡು ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಅಂತರ ಕಾಪಾಡಿ, ತಾಯಿ-ಮಕ್ಕಳ ಆರೋಗ್ಯ ರಕ್ಷಿಸಬೇಕೆಂದು ತಿಳಿಸಿದರು.

ಕಿವಿ, ಮೂಗು, ಗಂಟಲು ತಜ್ಞ ಡಾ. ಅವಿನಾಶ ಅವರು, ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ, ನವಜಾತು ಶಿಶುವಿನ ಕಿವಿಯ ಆರೈಕೆ, ಕಾರ್ಯಕ್ರಮದಡಿಯಲ್ಲಿ ಸಿಗುವ ಸೇವಾ ಸೌಲಭ್ಯಗಳ ಮತ್ತು ಚಿಕಿತ್ಸೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಗಂಗಾವತಿ ತಾಲೂಕ ಆರೋಗ್ಯಾಧಿಕಾರಿ ಡಾ.ಗೌರಿಶಂಕರ ಅವರು, ಕಿವಿಯ ಆರೋಗ್ಯ ರಕ್ಷಣೆಯಲ್ಲಿ ಅನುಸರಿಸಬೇಕಾದ ನಿಯಮಗಳ ಕುರಿತು ವಿವರವಾಗಿ ಮಾತನಾಡಿದರು.

ಆಡಿಯೋಲಾಜಿಸ್ಟ್ ಬಿಂದು ಅವರು, "ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ" ದಡಿಯಲ್ಲಿ ಕಿವಿಯ ಪರೀಕ್ಷೆ ಹಾಗೂ ಸೇವಾ ಸೌಲಭ್ಯಗಳ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಕನಕಗಿರಿ ಪಟ್ಟಣ ಪಂಚಾಯತಿಯ ಅಧ್ಯಕ್ಷರಾದ ಹುಸೇನ್‌ಬೀ ಚಳ್ಳಮರದ, ಉಪಾಧ್ಯಕ್ಷರಾದ ಕಂಠಿ ರಂಗನಾಯಕ, ಆರೋಗ್ಯ ರಕ್ಷಾ ಸಮಿತಿಯ ಸದಸ್ಯರಾದ ರಾಜೇಶ, ಹನುಮೇಶ, ಸಾದೀಕ್ ಪಾಷಾ, ಕನಕಗಿರಿಯ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಸಹನಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ., ಆರೋಗ್ಯ ನಿರೀಕ್ಷಣಾಧಿಕಾರಿ ರಮೇಶ, ಆಪ್ತಸಮಾಲೋಚಕ ಸಿದ್ದರಾಮಪ್ಪ ಸೇರಿದಂತೆ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಸಮುದಾಯ ಆರೋಗ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಓಪೆಕ್; ಶಸ್ತ್ರಚಿಕಿತ್ಸಾ ತಂತ್ರಜ್ಞರ ಹುದ್ದೆಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮಾ.05 – ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಗೆ ತಾತ್ಕಾಲಿಕವಾಗಿ ಶಸ್ತ್ರಚಿಕಿತ್ಸಾ ತಂತ್ರಜ್ಞರು ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

04 ಹುದ್ದೆಗಳಿದ್ದು, ಡಿಪ್ಲೊಮಾ ಇನ್ ಅಪರೇಶನ್ ಥಿಯೇಟರ್ ಅಂಡ್ ಅನಸ್ಥೇಷಿಯ ಟೆಕ್ನೋಲಜಿ ವಿದ್ಯಾರ್ಹತೆಯನ್ನು ಹೊಂದಿರಬೇಕು. ಕನಿಷ್ಟ ವೇತನ ಕಾಯ್ದೆನ್ವಯ ಭತ್ಯೆಯನ್ನು ಸಹ ನೀಡಲಾಗುವುದು. ಅಭ್ಯರ್ಥಿಗಳು ಮಾನ್ಯತೆ ಹೊಂದಿದ ಸಂಸ್ಥೆಯಲ್ಲಿ ವಿದ್ಯಾರ್ಹತೆ ಹೊಂದಿರಬೇಕು. ಅಭ್ಯರ್ಥಿಗಳು ಕನಿಷ್ಟ 02 ವರ್ಷಗಳ ಅನುಭವ ಹೊಂದಿರುವ ಅಭ್ಯರ್ಥಿಗಳು ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆ, ಹೈದ್ರಾಬಾದ್ ರಸ್ತೆ, ರಾಯಚೂರು ಇಲ್ಲಿಗೆ ಅರ್ಜಿಯನ್ನು ಮಾ.15ರ ಸಂಜೆ 4ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ ಎಂದು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿಶೇಷಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಸರ್ಕಾರ. ಗ್ಯಾರಂಟಿ ಸರ್ಕಾರ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

## ಯುವಜನರ ಭಾಗ್ಯವಿಧಾತ...

# ಯುವನಿಧಿ

ಪ್ರತಿ ತಿಂಗಳು ನಿರುದ್ಯೋಗ ಭತ್ಯೆ

₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

**ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ**



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

## 70,000 ಯುವಕ-ಯುವತಿಯರು ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ

- ವಿದ್ಯಾವಂತ ನಿರುದ್ಯೋಗಿ ಯುವಕ/ ಯುವತಿಯರಿಗೆ ಹಣಕಾಸಿನ ನೆರವು ನೀಡಿ, ಅವರಲ್ಲಿ **ಆತ್ಮಸ್ಥೈರ್ಯ ಬೆಳೆಸಿ ಸ್ವಾವಲಂಬಿಗಳನ್ನಾಗಿಸಲು ಯುವನಿಧಿ ಯೋಜನೆ ಸಹಕಾರಿ**
- 2 ವರ್ಷಗಳು ಅಥವಾ ಉದ್ಯೋಗ ದೊರಕುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ

**ಪ್ರತಿ ತಿಂಗಳು ಪದವೀಧರರಿಗೆ ರೂ.3000, ಡಿಪ್ಲೋಮಾದಾರರಿಗೆ ರೂ.1500 ನಿರುದ್ಯೋಗ ಭತ್ಯೆ ನೀಡಿಕೆ**

ಯುವನಿಧಿ ಯೋಜನೆ ಬಗ್ಗೆ ಮಾಹಿತಿ ನೀಡುತ್ತಿರುವ ಮಾನ್ಯ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್

| | | |
|---|---|---|
| 2023ರಲ್ಲಿ ಪದವಿ/ಡಿಪ್ಲೋಮಾ ಉತ್ತೀರ್ಣರಾದ ವಿದ್ಯಾರ್ಥಿಗಳು ಕನಿಷ್ಠ 6 ತಿಂಗಳವರೆಗೆ ಸರ್ಕಾರಿ/ ಖಾಸಗಿ ಉದ್ಯೋಗ ಹೊಂದಿಲ್ಲದ ಕರ್ನಾಟಕದಲ್ಲಿ ವಾಸವಿರುವವರು | ಸ್ವಯಂ ಉದ್ಯೋಗ ಹೊಂದಿಲ್ಲದವರು ಮತ್ತು ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವವರು | ನೋಂದಣಿಗೆ ಅಗತ್ಯವಿರುವ ದಾಖಲಾತಿಗಳು: ಎಸ್.ಎಸ್.ಎಲ್.ಸಿ., ಪಿಯುಸಿ, ಪದವಿ/ಡಿಪ್ಲೋಮಾ ಪ್ರಮಾಣಪತ್ರ |

ನೋಂದಾಯಿಸಲು ಭೇಟಿ ನೀಡಿ **https://sevasindhugs.karnataka.gov.in**
ಉಚಿತವಾಗಿ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೂಡ ಅರ್ಜಿ ಸಲ್ಲಿಸಬಹುದು

**ಸಹಾಯವಾಣಿ : 1800 599 9918**

ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಾಯಿತ ಅಭ್ಯರ್ಥಿಗಳು ಮಾಸಿಕವಾಗಿ ನಿರುದ್ಯೋಗಿ ಎಂದು ಕಡ್ಡಾಯವಾಗಿ ದೃಢೀಕರಣ ಮಾಡಬೇಕು ಮತ್ತು ತಪ್ಪು ಮಾಹಿತಿ ನೀಡಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು

**ನುಡಿದಂತೆ ನಡೆದಿದ್ದೇವೆ...**

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಗೃಹಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಗಡಿಭಾಗದ ಹಾಗೂ ವಿಶೇಷ ಮಾಧ್ಯಮ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು